# ‘ನಾಡೋಜ’ ಮುದೇನೂರು ಸಂಗಣ್ಣ :
# ಅನುಬಂಧ

**ಜೀವನವಿವರ**

ಹುಟ್ಟಿದ ಸ್ಥಳ : ಚಿಗಟೇರಿ (ಹಿಂದಿನ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲೂಕಿನ ಗ್ರಾಮ)

ಹುಟ್ಟಿದ ದಿನಾಂಕ : ೧೭ನೇ ಮಾರ್ಚ, ೧೯೨೭

ವಿದ್ಯಾರ್ಹತೆ : ಇಂಟರ್ ಮೀಡಿಯೇಟ್

ಉದ್ಯೋಗ : ಕೃಷಿ ಮತ್ತು ಹೊಗೆಸೊಪ್ಪಿನ ವ್ಯಾಪಾರ

ಕುಟುಂಬ : ಪತ್ನಿ : ಶಾರದಮ್ಮ
ಮಗ: ಅಶೋಕ
ಪುತ್ರಿಯರು: ರಾಜೇಶ್ವರಿ, ಜಯಲಕ್ಷ್ಮಿ, ನಾಗಲೀಲಾ

ಏಕೀಕರಣ ಚಳವಳಿಯ ಬಳ್ಳಾರಿ ಜಿಲ್ಲೆಯ ಹೋರಾಟದ ಮುಂದಾಳತ್ವ, ಒಂದು ತಿಂಗಳ ಸೆರೆ ಮನೆವಾಸ.

೧೯೫೭ರಲ್ಲಿ ಚಿಗಟೇರಿ ಗ್ರಾಮ ಪಂಚಾಯ್ತಿ ಚೇರಮನ್ ಹರಪನಹಳ್ಳಿ ತಾಲೂಕು ಬೋರ್ಡ್ ಸದಸ್ಯ

ಚಿಗಟೇರಿ ನಾರದ ಮುನಿಯ ಹೈಸ್ಕೂಲಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ.

೧೯೬೨ರಲ್ಲಿ ಪ್ರಜಾಸೋಷಲಿಸ್ಟ ಪಕ್ಷದ ಅಭ್ಯರ್ಥಿಯಾಗಿ ಹರಪನಹಳ್ಳಿ ವಿಧಾನ ಸಭೆಗೆ ಸ್ಪರ್ಧೆ, ಸೋಲು.

ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಸಲಹೆಗಾರರಾಗಿ ಕಾರ್ಯನಿರ್ವಹಣೆ.

ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ, (೧೯೮೩-೧೯೮೯)

ಕನ್ನಡ ವಿಶ್ವವಿದ್ಯಾಲಯದ ಮೊದಲ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಣೆ.

ಕನ್ನಡ ವಿಶ್ವವಿದ್ಯಾಲಯದ ಮೊದಲ ಕಟ್ಟಡ ಸಲಹಾ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ.

ಮರಣ ೨೬.೧೦.೨೦೦೮ (ತಮ್ಮ ದೇಹವನ್ನು ದಾವಣಗೆರಿಯ ವೈದ್ಯಕೀಯ ಕಾಲೇಜಿಗೆ ದಾನ ಮಾಡಿದ್ದರು)

**ಕೃತಿಗಳು**

೧. ಹಳ್ಳಿಯ ಪದಗಳು (ಕೆ. ವಿರೂಪಾಕ್ಷಗೌಡ ಅವರೊಂದಿಗೆ)

೨. ನವಿಲು ಕುಣಿದಾವ

೩. ಚಿತ್ರಪಟ ರಾಮಾಯಣ

೪. ಗೊಂದಲಿಗರ ದೇವೇಂದ್ರಪ್ಪನ ಆಟಗಳು

೫. ಗೊಂಬಿಗೌಡರ ಸೂತ್ರದ ಗೊಂಬೆ ಆಟಗಳು

೬. ಜನಪದ ಮುಕ್ತಕಗಳು

೭. ಸೂಳೆ ಸಂಕವ್ವ,

೮. ಬಾಳ ಭಿಕ್ಷುಕ (ಸಾಣೇಹಳ್ಳಿಯ `ಶಿವಸಂಚಾರ` ತಂಡ ಪ್ರಯೋಗಿಸಿದ ನಾಟಕಗಳು)

೯. ಶೀಲಾವತಿ (ಮರಿಯಮ್ಮನಹಳ್ಳಿಯ ಲಲಿತ ಕಲಾರಂಗದಿಂದ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ನೂರಕ್ಕೂ ಹೆಚ್ಚು ಪ್ರಯೋಗ ಕಂಡ ನಾಟಕ)

೧೦. ಅವ್ವಣ್ಣವ್ವ

೧೧. ಚವತಿಯ ಚಂದ್ರ

೧೨. ಬಂಗಾರದ ತಟ್ಟೆ

೧೩. ಲಕ್ಷಪತಿ ರಾಜನ ಕಥೆ (ಬಿ.ಜಯಶ್ರೀ ನಿರ್ದೇಶನದ ರಾಜ್ಯ ಮತ್ತು ಹೊರ ರಾಜ್ಯದಲ್ಲಿ ಪ್ರದರ್ಶನಗೊಂಡ ನಾಟಕ)

೧೪. ಅಂಗೂಲಿ ಮಾಲಾ

೧೫. ಬುದ್ಧ ಬಾಲ

೧೬. ರಸದಾಳ ರಾಜನ ಕತೆ

೧೭. ಚಿಗಟೇರಿ ಪದಕೋಶ-(ಭಾಷಾ ನಿಘಂಟು)

೧೮. ಆ ಅಜ್ಜ ಈ ಮೊಮ್ಮಗ-(ಕವನ ಸಂಕಲನ)

೧೯. ಕೊಂಡಜ್ಜಿ ಬಸಪ್ಪ-(ಜೀವನ ಚರಿತ್ರೆ)

**ಭಾಷಾಂತರ**

೧೦. ಭಾರತ ಪ್ರೇಮ ಕಥನ (ಬಂಗಾಲಿಯಿಂದ)

೧೧. ಕಥಾವೋ ಕಾಫೀ (ಬಂಗಾಲಿಯಿಂದ)

೧೨. ಏಕದಾನಿಶಾಥ್ ಕಾಲೆ (ಬಂಗಾಲಿಯಿಂದ)

೧೩. ಘಾಶೀರಾಮ ಕೊತ್ವಾಲ (ಮರಾಠಿಯಿಂದ)

## ಪ್ರಶಸ್ತಿ-ಪುರಸ್ಕಾರಗಳು

ಕರ್ನಾಟಕ ನಾಟಕ ಅಕಾಡೆಮಿಯ ಫೆಲೊಶಿಪ್-೧೯೮೯

ಕರ್ನಾಟಕ ಜಾನಪದ ಅಕಾಡೆಮಿಯ `ಜಾನಪದ ತಜ್ಞ` ಪ್ರಶಸ್ತಿ-೧೯೯೨

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ-೧೯೯೬

ಡಾ. ಎಲ್ ಬಸವರಾಜ ಪ್ರತಿಷ್ಠಾನ ಪ್ರಶಸ್ತಿ-೨೦೦೨

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ-೨೦೦೦

ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ-೨೦೦೨

ಉಮಾಪತಿ ಚುಕ್ಕಿ ಪ್ರತಿಷ್ಠಾನ ಪ್ರಶಸ್ತಿ

ಕನ್ನಡ ಸಿರಿ ಪ್ರಶಸ್ತಿ-೨೦೦೨

ಶಿವಮೊಗ್ಗದ ಕರ್ನಾಟಕ ಸಂಘದ ಗೌರವ ಸದಸ್ಯತ್ವ-೨೦೦೨

ಮಹಾಲಿಂಗ ರಂಗ ಸಾಹಿತ್ಯ ಪ್ರಶಸ್ತಿ-೨೦೦೩

ಕನ್ನಡ ವಿಶ್ವವಿದ್ಯಾಲಯ, ಹಂಪಿ `ನಾಡೋಜ` ಪದವಿ-೨೦೦೫

ಕರ್ನಾಟಕ ಸರ್ಕಾರದ ಕರ್ನಾಟಕ ಏಕೀಕರಣ ಪ್ರಶಸ್ತಿ-೨೦೦೬

ಕು.ಶಿ. ಹರಿದಾಸ್ ಭಟ್ ಪ್ರಶಸ್ತಿ-೨೦೦೭

`ಚಿಗಟೇರಿ ಪದಕೋಶ`ಕ್ಕೆ ಅಂತರಾಷ್ಟ್ರೀಯ ದ್ರಾವಿಡ ಭಾಷಾ ವಿಜ್ಞಾನ ಪ್ರಶಸ್ತಿ

ಬಳ್ಳಾರಿ ಜಿಲ್ಲೆ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ, (ಹಡಗಲಿ-೧೯೯೪)

ದಾವಣಗೆರಿ ಜಿಲ್ಲೆ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ

೨೧ನೇ ಅಖಿಲ ಕರ್ನಾಟಕದ ಜಾನಪದ ಸಮ್ಮೇಳದ ಅಧ್ಯಕ್ಷತೆ (೧೯೯೪-ಧಾರವಾಡ)

ಮೈಸೂರಿನಲ್ಲಿ ಅಖಿಲ ಭಾರತ ಜಾನಪದ ಸಮಾವೇಶದಲ್ಲಿ ಗೌರವ

ಕನ್ನಡ ವಿಶ್ವವಿದ್ಯಾಲಯ, ಹಂಪಿ ನುಡಿಹಬ್ಬದ ಭಾಷಣ (ಘಟಿಕೋತ್ಸವ ಭಾಷಣ-೨೦೦೧)

## ಅಂತರಂಗ

ಜೀವನ ಪ್ರೀತಿಗೆ ಹೆಸರಾಗಿದ್ದ ಸಂಗಣ್ಣನವರು, ಬದುಕಿನ ನಿಗೂಢಗಳನ್ನೂ ಶೋಧಿಸುತ್ತಲೇ ಅದನ್ನು ಅರ್ಥಪೂರ್ಣವಾಗಿರಿಸಿಕೊಂಡಿದ್ದವರು. ತಮ್ಮ ಊರನ್ನೇ ಕೇಂದ್ರವಾಗಿರಿಸಿಕೊಂಡು ಬೇರೆ ಬೇರೆ ಊರುಗಳ ಸ್ನೇಹಿತರೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ಶಿವರಾಮ ಕಾರಂತ, ಕೆ.ವಿ. ಸುಬ್ಬಣ್ಣ ರಿಂದ ಎಂ.ಪಿ. ಪ್ರಕಾಶ, ಕುಂ. ವೀರಭದ್ರಪ್ಪ, ಬಸವರಾಜ ಮಲಶೆಟ್ಟಿ, ಮೃತ್ಯುಂಜಯ ರುಮಾಲೆ, ಸುಭದ್ರಮ್ಮ ಮನ್ಸೂರು, ಗೊಂದಲಿಗರ ದೇವೆಂದ್ರಪ್ಪನಿಂದ ನೂರಾರು ಜಾನಪದ ಕಲಾವಿದರನ್ನೊಳಗೊಂಡು ನನ್ನಂಥ ಕಿರಿಯನವರಿಗೂ ಅವರ ಸ್ನೇಹ, ಸಂಪರ್ಕವಿತ್ತು. ಮನೆಯಲ್ಲಿ ಏನಾದರೊಂದು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದರೆ ಒಡನಾಡಿಗಳೆಲ್ಲರಿಗೂ ಅಂಚೆಯ ಮೂಲಕ ಪತ್ರ ಬರೆದು ಆಹ್ವಾನಿಸುತ್ತಿದ್ದರು.

`ಅತಿಥಿ ದೇವೋಭವ` ಎನ್ನುವ ಮಾತನ್ನು ಅಕ್ಷರ ಸಹ ಪಾಲಿಸಿದವರು ಇವರು ಹಾಗೂ ಇವರ ಕುಟುಂಬ. ಮನೆಗೆ ಯಾರಾದರೂ ಅತಿಥಿ ಬಂದರೆ, ಸ್ವತಃ ಸಂಗಣ್ಣರೆ ಎದ್ದು ಬಂದು ಒಳ ಕರೆದು, ಅವರ ಮುಖ ತೊಳೆಯಿಸಿ, ಊಟವನ್ನು ಮಾಡಿಸಿದ ಮೇಲೆಯೇ ಅವರೊಂದಿಗೆ ಮಾತು ಶುರುಮಾಡುತ್ತಿದ್ದರು. ಅತಿಥಿ ಸತ್ಕಾರಕ್ಕೆ ಹೆಂಡತಿ, ಮಗ, ಸೊಸೆ, ಮೊಮ್ಮಕ್ಕಳು ಹೀಗೆ ಎಲ್ಲರೂ ನಿಲ್ಲುತ್ತಿದ್ದರು. ಇಂಥ ಪರಂಪರೆಯನ್ನು ಈ ಹೊತ್ತಿನ ಯಾವ ಸಾಹಿತಿಯ ಮನೆಯಲ್ಲಿಯು ನಾನು ಕಂಡಿಲ್ಲ.

ಸಂಗಣ್ಣರಿಗೆ ನಾಡಿನ ತುಂಬ ಸ್ನೇಹಿತರು. ಪಕ್ಕದ ಹಡಗಲಿ, ದಾವಣಗೆರೆ, ಮರಿಯಮ್ಮನ ಹಳ್ಳಿ, ಹೊಸಪೇಟೆಯಿಂದ ದೂರದ ಹೆಗ್ಗೋಡು, ಉಡುಪಿಯವರಿಗೆ, ಅತ್ತ ಬೆಳಗಾವಿ ಜಿಲ್ಲೆಯ ಗಡಿ ಭಾಗವಾದ ನಿಪ್ಪಾಣಿ ಗ್ರಾಮದ ಜನರಿಗೂ ಇವರ ಸ್ನೇಹ. ಬೇರೆ ಬೇರೆ ಊರುಗಳಲ್ಲಿ ರಂಗ ಪ್ರಯೋಗಗಳು, ನಾಟಕಗಳು ನಡೆಯುತ್ತಿದ್ದರೆ ಅಲ್ಲಿಗೆ ಹೋಗುತ್ತಿದ್ದರು. ಹಿಂದೊಮ್ಮೆ ಹಡಗಲಿಗೂ ಇವರಿಗೂ ಕರುಳ ಬಳ್ಳಿಯ ಸಂಬಂಧ ಎಂ.ಪಿ. ಪ್ರಕಾಶ್‌ರ ಎಲ್ಲಾ ರಂಗಭೂಮಿ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಗಣ್ಣನವರು ಇರಲೇಬೇಕು. ಪ್ರಕಾಶ್‌ರು ನಿರ್ದೇಶಿಸುವ ನಾಟಕಗಳನ್ನು ಮೊದಲು ಸಂಗಣ್ಣನವರು ನೋಡಲೇಬೇಕಿತ್ತು. ಡಾ. ಶಿವರಾಮ ಕಾರಂತರ ೬೦ನೇ ಹುಟ್ಟು ಹಬ್ಬ ಉಡುಪಿಯ ಎಂ.ಜಿ.ಎಂ. ಕಾಲೇಜ್‌ನಲ್ಲಿ ನಡೆದಾಗ ಸಂಗಣ್ಣ ಹಾಗೂ ಎಂ.ಪಿ. ಪ್ರಕಾಶ್‌ರು ಜೊತೆಯಲ್ಲೇ ಹೋಗಿ ಬಂದಿದ್ದರು.

ಇವರು ರಚಿಸಿದ ಕವಿತೆ, ಸಾಹಿತ್ಯ ಹಾಗೂ ನಾಟಕಗಳಲ್ಲಿ ಮಾನವೀಯತೆ, ಪ್ರೀತಿ, ವಿಶ್ವಾಸಕ್ಕೆ ಆದ್ಯತೆ ಇತ್ತು. ೨೫ರ ಹರಯದಿಂದಲೇ ಜಾನಪದದ ಅಧ್ಯಯನಕ್ಕೆ ಈಡಾದ ಇವರು ತಮ್ಮ ೬೦ನೇ ವಯಸ್ಸಿನವರಿಗೂ ಎಲ್ಲೂ ಸದ್ದು-ಗದ್ದಲವಿಲ್ಲದೆ ಸಾಧನೆ ಮಾಡಿದ ಸಾಧಕರಾಗಿದ್ದಾರೆ. ನಂತರ ಸಭೆ ಸಮಾರಂಭಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಂಗಣ್ಣ ಯಾರಿಂದಲೂ ಉಚಿತವಾಗಿ ಅಥವಾ ಗೌರವ ಪ್ರತಿಯನ್ನಾಗಿ ಸಾಹಿತ್ಯ ಪುಸ್ತಕಗಳನ್ನು ಪಡೆದವರಲ್ಲ. ಯಾವುದಾದರೂ ಹೊಸ ಪುಸ್ತಕ ಬಿಡುಗಡೆಯಾದರೆ, ಅದರ ಹತ್ತಾರು ಪ್ರತಿಗಳನ್ನು ತಮ್ಮ ಸ್ವಂತದ ಹಣದಿಂದ ಖರೀದಿಸುತ್ತಿದ್ದರು. ತಮ್ಮ ಹೆಗಲಿನ ಚೀಲದಲ್ಲಿ ಇಟ್ಟುಕೊಂಡು, ಓದುವ ಹವ್ಯಾಸವಿದ್ದ ಆಸಕ್ತ ಒಡನಾಡಿಗಳಿಗೆ ತಾವೇ ಉಚಿತವಾಗಿಯೇ ಕೊಡುತ್ತಿದ್ದರು. ಹೀಗೆ ಸಾಹಿತ್ಯವನ್ನು ಬೆಳೆಸುವ ಕಾಯಕವನ್ನು ನಿಷ್ಠೆಯಿಂದ ಮಾಡಿದವರು.

ಆಧುನಿಕತೆಯ ಅಬ್ಬರದಲ್ಲಿ ನಾಡಿನ ಪಾಮರ ಸಾಹಿತ್ಯ ತನ್ನ ಸ್ಥಾನ ಕಳೆದುಕೊಳ್ಳುತ್ತಿರುವ ಬಗ್ಗೆ ಅಪಾರ ಕಳಕಳಿಯುಳ್ಳವರಾಗಿದ್ದರು. ಅನೇಕ ವಿಚಾರಗಳನ್ನು ಅಂತರಂಗದಲ್ಲಿ ತುಂಬಿಕೊಂಡು ಧ್ಯಾನಿಸುತ್ತಿದ್ದರು. ಜಪಾನ್ ಏನೆಲ್ಲ ತಾಂತ್ರಿಕವಾಗಿ ಮುಂದುವರಿದಿದ್ದರೂ, ಅದು `ಬುಲ್‌ರಾಕ್' ಎಂಬ ಜಾನಪದ ಕಲೆಯನ್ನು ಉಳಿಸಿಕೊಂಡಿದೆ. ಅಲ್ಲಿಯ ಸಾಹಿತಿಗಳು ಈ ಕಲೆಯ ಉಳುವಿಗಾಗಿಯೇ ಪ್ರತಿವರ್ಷ ಹೊಸ ನಾಟಕಗಳನ್ನು ಬರೆಯುತ್ತಾರೆ. ಆದರೆ ನಮ್ಮ ಜಾನಪದ ಕಲೆಗಳಿಗಾಗಿ ಯಾವ ಸಾಹಿತಿ ಬರೆಯುತ್ತಾರೆ ಹೇಳಿ? ಎಂದು ಪ್ರಶ್ನಿಸುತ್ತಿದ್ದರು.

ನಮ್ಮ ಸಾಂಘಿಕ ಗುಣದ ಜನಪದ ಕಲ್ಪನೆ ತುಂಬಾ ಪುರಾತನವಾದದ್ದು. ರಾಜ್ಯ-ರಾಜಪದ್ಧತಿಗೂ ಮೊದಲಿನದು. ಇಂದಿಗೂ ಈ ಘಟಕನಾಮ ಹಾಗೇ ಉಳಿದಿರುವುದೊಂದು ಅಚ್ಚರಿ. ನಮ್ಮ ದೇಸಿತನದ ತಾಯಿಬೇರಿರುವುದೇ ಜನಸಾಮಾನ್ಯರ ಜೀವನದಲ್ಲಿ. ಸ್ಥಳೀಯ ಪ್ರಾದೇಶಿಕ, ಭೌಗೋಳಿಕ, ಪಾರಂಪರಿಕ ಪರಿಸ್ಥಿತಿಗಳನ್ನು ದೇಸಿ ಹೊಂದಿಕೊಂಡಿದೆ. ಜನಪದ ಜೀವನ ವಿಧಾನದಲ್ಲಿ ನಂಬುಗೆ, ಆಚರಣೆ, ಸಾಮಾಜಿಕ ಸಂರಚನೆಗಳಲ್ಲಿ ವೈವಿಧ್ಯ ಇದೆ. ಜಾತಿ-ಮತ-ಪಂಥಗಳೇನೇ ಇದ್ದರೂ ನೈತಿಕ ನಡುವಳಿಕೆಯ ಬದ್ಧತೆ ಇದೆ. ಊಟ, ಉಡುಗೆ, ಕಾಯಕ ಮುಂತಾದವುಗಳಲ್ಲಿ ವಿಭಿನ್ನತೆ ಇದ್ದರೂ, ಪರಸ್ಪರ ವಿಶ್ವಾಸ, ಪ್ರೀತಿ, ಅನುಕಂಪ, ಮಾನವೀಯತೆಗಳ ಆಗರವದು. ಕಾಯಕಕ್ಕೂ ವಿಭಿನ್ನ. ಸಾಮಾಜಿಕರು ಒಬ್ಬರಿಗೊಬ್ಬರು ಪೂರಕರು ಎನ್ನುತ್ತಾರೆ.

ಮನೆ ಬಾಗಿಲಿಗೆ ಬರುವ ಹೆಳವರು, ಚೌಡಿಕೆಯವರು, ಮಂಡರು, ಕೋಲೆ ಬಸವರು, ಬಾಲ ಬಸವರು, ಎಣ್ಣೆ ಜೋಗೇರು, ಸುಡಗಾಡ ಸಿದ್ಧರು, ದಾಸಪ್ಪಗಳು ಇನ್ನಿತರರು ಭಿಕ್ಷುಕರಲ್ಲ, ನಮ್ಮ ಇತಿಹಾಸ, ಪರಂಪರೆಯನ್ನು ಉಳಿಸಿ, ಬೆಳೆಸುವ ಪ್ರಚಾರಕರು ಎಂದು ನಂಬಿಕೊಂಡಿದ್ದವರು.

ಜಾನಪದದ ಬಗ್ಗೆ ಕಾರ್ಯ ಮಾಡುತ್ತಲೇ ವಿಜ್ಞಾನ ತಂತ್ರಜ್ಞಾನ ಕುರಿತು ಚಿಂತಿಸುತ್ತಿದ್ದರು. ನಾವೀಗ ವೈಜ್ಞಾನಿಕ ಹಾಗೂ ತಾಂತ್ರಿಕ ಸಮೃದ್ಧಿಗಳ ಯುಗಾವತಾರಿಗಳು. ವಿದ್ಯುನ್ಮಾನ ಮಾಧ್ಯಮಗಳು ಈ ಅಪರಂಪಾರ ಪೃಥ್ವಿಯನ್ನು ಒಂದು ಪುಟ್ಟ ಹಳ್ಳಿಯಾಗಿಸಿದೆ. ನಮ್ಮ ಗೋತ್ರವೀಗ ಭೂಗೋತ್ರ. ನೋಬೆಲ್ ಪಾರಿತೋಷಕ ವಿಜೇತ ವಿಜ್ಞಾನಿ ಡಾ. ಆರ್ನೋ ಪೆಂಜಿಯಾಸ್ ಹೇಳುತ್ತಾರೆ. ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ಕಂಪ್ಯೂಟರ್‌ಗಳು ಅಂಚೆ ಬಿಲ್ಲಿಯ ಬೆಲೆಗೆ ದೊರೆಯುತ್ತದೆ. ನಮ್ಮ ನಾಡಿನ ಶೈಕ್ಷಣಿಕ ರಂಗವನ್ನು ಈಗಾಗಲೇ ಅವು ಪ್ರವೇಶಿಸಿವೆ.

ಇಷ್ಟೇ ಅಲ್ಲ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಕಣಿ ಹೇಳುತ್ತಿರುವುದಕ್ಕೆ ಮಿತಿಯೇ ಇಲ್ಲವೆನ್ನುತ್ತಾರೆ.

ಈ ಶತಮಾನದ ಕೊನೆಗೆ ಬರವಣಿಗೆಯೆಂಬುದೇ ಇನ್ನಿಲ್ಲವಾಗುತ್ತದೆ. ಗ್ರಂಥ ಸಂತಾನವೇ ನಾಶವಾಗುತ್ತದೆ. ಕಾಂಪ್ಯಾಕ್ಟ ಡಿಸ್ಕಗಳ ಹಾವಳಿ ಹೆಚ್ಚಾಗುತ್ತದೆ. ಸಾಕ್ಷರತೆ ನಿರುಪಯುಕ್ತವಾಗುವ ಕಾಲ ಸನಿಹದಲ್ಲಿದೆ. ಬರೀ ವಾಕ್‌ದೃಶ್ಯಗಳ ದರ್ಬಾರಿನ ಯುಗ ಆರಂಭವಾಗಲಿದೆ... ಇತ್ಯಾದಿ. ಈಗಾಗಲೇ ಈ-ಮೇಲ್ ಪುಸ್ತಕ ಭಾರತೀಯ ಪೇಟೆಗೆ ಬಂದಿವೆಯಲ್ಲ!

ಆದರೂ ಈ ವಿಜ್ಞಾನ ತಂತ್ರಜ್ಞಾನಗಳಿಗೆ ಅವುಗಳದೇ ಆದ ಮಿತಿ ಇದೆ. ತಾವೇನು ಸಾಧಿಸಬಲ್ಲೆವು ಎಂದು ಮಾತ್ರ ಹೇಳುವ ಅವು ನಾವೇನು ಮಾಡಬೇಕೆಂಬುದನ್ನು ಹೇಳಲಾರವು. ಪುಸ್ತಕದ ಓದು ಕೊಡುವ ಅನುಭವಗಳನ್ನೆಲ್ಲ ದೂರದರ್ಶನ, ಸಿನೆಮಾ, ಇಂಟರ್‌ನೆಟ್ ಕೊಡಲಾರವು. ಮುಂದೇನಾಗುತ್ತದೋ ಗೊತ್ತಿಲ್ಲ. ಆದರೆ ಸದ್ಯಕ್ಕಂತೂ ಇಷ್ಟು ನಿಜ ಓದು ಆಂತರಿಕವಾಗಿ ಅರಳಿಸುತ್ತದೆ. ಮರು ಓದಿನಲ್ಲಿ ಹೊಸ ಅರ್ಥಗಳನ್ನು ಹೊಳೆಸುತ್ತದೆ. ಮನಸ್ಸು ಹೃದಯಗಳನ್ನು ತಟ್ಟಿ ಪ್ರಜ್ಞೆಯನ್ನು, ನಮ್ಮನ್ನು ಸಂಮೋಹನಗೊಳಿಸುತ್ತವೆ ಅಷ್ಟೇ. ನಮ್ಮ ಅರಿವಿನ ಸಾಧನವಾಗಿ ಗ್ರಂಥದ ಪ್ರಾಮುಖ್ಯತೆ ಈಗಲೂ ಗಟ್ಟಿಯಾಗಿದೆ.

ಸಾಂಪ್ರದಾಯಿಕ ಕುಟುಂಬದಿಂದ ಬಂದಿದ್ದ ಸಂಗಣ್ಣನವರು ಎಂದೂ ಕುರುಡ ನಂಬಿಕೆ, ಸಂಪ್ರದಾಯಗಳನ್ನು ನಂಬಿದವರಲ್ಲ. ಸಮಾಜವಾದದ ಚಿಂತನೆಯ ಹಿನ್ನೆಲೆಯಲ್ಲಿ ಬಂದ ಇವರು ದೇವರು, ಧರ್ಮ ಎಂದೂ ನಂಬಿದವರಲ್ಲ. ಯಾವ ಮಠ, ಮಂದಿರಗಳಿಗೆ ಹೋದವರಲ್ಲ. ಆದರೆ ವೈಚಾರಿಕತೆ ಹಾಗೂ ವೈಜ್ಞಾನಿಕತೆಯ ಚಿಂತನೆಯಿರುವ ಸ್ವಾಮೀಜಿ, ಯಾರೇ ಆಗಿರಲಿ ಅವರೊಂದಿಗೆ ಮಾತ್ರ

ಸಂಪರ್ಕವಿತ್ತು. ಆದರೆ ಮತ್ತೊಬ್ಬರ ವಿಚಾರ, ನಂಬಿಕೆಗಳನ್ನು ವಿರೋಧಿಸಿದವರಲ್ಲ. ಕಾಲೇಜಿನ ವಿದ್ಯಾಭ್ಯಾಸ ಮುಗಿಸಿಕೊಂಡು ಚಿಗಟೇರಿಗೆ ಬಂದಾಗ, ಇನ್ನೂ ಉತ್ಸಾಹದ ಯುವಕ. ಊರಿನ ಕೊರವರು ಊದುತ್ತಿದ್ದ ಮುಖವೀಣೆಯನ್ನು ಊದಿದಾಗ, ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿ ಜಾತಿ ಭ್ರಷ್ಟನನ್ನಾಗಿಸಿ ಕೆಲ ವರ್ಷ ಜಾತಿಯಿಂದ ಹೊರಗಿಟ್ಟಿದ್ದರು. ಜಾತ್ಯಾತೀತ ಮನಸ್ಸಿನ ಸಂಗಣ್ಣರಿಗೆ ಇದು ಬಹಳ ನೋವನ್ನುಂಟು ಮಾಡಿತು. ಇಂಥ ಘಟನೆಗಳಿಂದ ಅವರು ಅಂತರ್ಮುಖಿಗಳಾಗುತ್ತ ಹೋದರು.

ಹತ್ತಾರು ವರ್ಷಗಳ ಹಿಂದೆ ಸಂಗಣ್ಣನವರು ಹಠಾತ್ ಹೃದಯಾಘಾತಕ್ಕೆ ಈಡಾದರು. ನಂತರ ಹೃದಯ ಚಿಕಿತ್ಸೆ ಮಾಡಿಸಿಕೊಂಡು ಬಂದು, ಸ್ವಲ್ಪ ದಿನ ವಿಶ್ರಾಂತಿ ಪಡೆದು ಮತ್ತೆ ಎಂದಿನಂತೆ ಸಾಹಿತ್ಯ-ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ತಮ್ಮ ಸ್ನೇಹಿತ ಕೊಂಡಜ್ಜಿ ಬಸಪ್ಪ ಕುರಿತ ಜೀವನ ಚರಿತ್ರೆ ಬರೆದು ಬಿಡುಗಡೆಗೊಳಿಸಿದರು.

ಕು.ಶಿ. ಹರಿದಾಸಭಟ್ಟ ಪ್ರಶಸ್ತಿಯನ್ನು ಪಡೆಯಲೆಂದು ಉಡುಪಿಗೆ ಹೋದಾಗ "ಕಡೆಯ ಸಲ ನಿಮ್ಮಲ್ಲಿಗೆ ಬರುತ್ತಿದ್ದೇನೆ, ಒಮ್ಮೆ ಬಂದು ಹೋಗಬೇಕಂತ ಇತ್ತು. ಆ ಆಸೆ ನೆರವೇರುತ್ತಿದೆ ತಾಯಿ" ಎಂದು ಖ್ಯಾತ ಲೇಖಕಿ ವೈದೇಹಿಯವರ ಮುಂದೆ ತಮ್ಮ ಮನದ ಇಚ್ಛೆಯನ್ನು ವ್ಯಕ್ತಮಾಡಿದ್ದರು.

ಮತ್ತೊಂದು ಸಂದರ್ಭದಲ್ಲಿ ತಮ್ಮ ಮನೆಯಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿ, ಒಡನಾಡಿಗಳನ್ನೆಲ್ಲಾ ಕರೆಯಿಸಿ, ಸಂಗೀತ ಕಛೇರಿ ಏರ್ಪಡಿಸಿ, ಪುಷ್ಕಳ ಊಟ ಉಣಬಡಿಸಿದ ಮೇಲೆ ಒಡನಾಡಿಗಳನ್ನು ಕುರಿತು "ಇದೇ ನನ್ನ ವೈಕುಂಠ ಸಮಾರಾಧನೆಯ ಊಟ ಎಂದು ಹೇಳಿದ್ದರು". ಇದ್ದಾಗ ತಿಥಿ ಊಟ ಮಾಡಿಸಿ ಖುಷಿ ಪಟ್ಟ ಸಂತ ಸಂಗಣ್ಣ. ಈ ಧೈರ್ಯ ಯಾರಿಗೆ ತಾನೇ ಬಂದೀತು...!

ಈ ರೀತಿ ತಮ್ಮ ಸಾವಿನ ಮುನ್ಸೂಚನೆಯಂತೆ ಆಡಿದ ಮಾತುಗಳನ್ನು ಅವರ ಒಡನಾಡಿಗಳ್ಯಾರು ಗ್ರಹಿಸಿರಲಿಲ್ಲ. ಆದರೆ ಅವರು ನುಡಿದಂತೆ ಇರುವುದೆಲ್ಲವ ಬಿಟ್ಟು ಎದ್ದು ಹೊರಟೆ ಹೋಗಿ ಬಿಟ್ಟರು. ಹೋಗುವಾಗಲು ಅವರು ಹಾಗೆ ಸುಮ್ಮನೆ ಹೋಗಲಿಲ್ಲ. ತಮ್ಮ ದೇಹವನ್ನು ದಾವಣಗೆರಿಯ ಬಾಪೂಜಿ ಮೆಡಿಕಲ್ ಕಾಲೇಜಿಗೆ ದಾನ ಬರೆದಿಟ್ಟಿದ್ದರು. ನೀವು ಎಂತಹ ಸಾವನ್ನು ಬಯಸುತ್ತೀರಿ? ಎಂದು ಪ್ರಶ್ನೆ ಕೇಳಿದಾಗ, ಸದ್ದಿಲ್ಲದೇ ಯಾರೊಬ್ಬರಿಗೂ ಹೊರೆಯಾಗದೆ ಒಮ್ಮೆಗೆ ವಿದಾಯ ಹೇಳುವಂತಹದು. ಅವರು ತಾವು ಬಯಸಿರುವಂತಯೇ ಸದ್ದು ಮಾಡದೆ, ಯಾರಿಗೂ ತೊಂದರೆ, ಹೊರೆಯಾಗದ ರೀತಿಯಲ್ಲೇ ಸಾವನಪ್ಪಿದರು.

ಮಗ ಅಶೋಕರಿಗೆ ಕಟ್ಟುನಿಟ್ಟಾಗಿ ಹೇಳಿ, ಮಣ್ಣಲ್ಲಿ ಮಣ್ಣಾಗಿ ಹೋಗುವ ಬದಲು, ವೈದ್ಯ ವಿದ್ಯಾರ್ಥಿಗಳಿಗೆ ಉಪಯೋಗವಾಗಲಿ ಎಂದು ದೇಹವನ್ನು ದಾನ ಮಾಡಿದರು. ಇವರು ಕಣ್ಣುಗಳು ಕುರುಡನೊಬ್ಬನಿಗೆ ಬೆಳಕನ್ನು ನೀಡಿವೆ. ಇದರಿಂದ ಬದುಕಿದಾಗಲೂ ಆದರ್ಶವಾಗಿದ್ದ ಸಂಗಣ್ಣ ಸತ್ತಾಗಲೂ ಆದರ್ಶವಾದರು.

ಜಾನಪದವೊಂದು ತನ್ನ ನಿಜ ಸತ್ಯವನ್ನು ಗಟ್ಟಿಯಾಗಿ ಇಟ್ಟುಕೊಂಡೇ ಆಧುನಿಕ ಜ್ಞಾನ ವಿಜ್ಞಾನದ ಸಂಸ್ಕಾರ ಪುಷ್ಠಿ ಪಡೆದರೆ ಹೇಗೆ-ಹಾಗೇ ಮುದೇನೂರು ಸಂಗಣ್ಣ. ಜಾನಪದವನ್ನು ಉಸಿರಾಗಿಸಿಕೊಂಡು ಬದುಕಿದ ಇವರು ಕೊನೆಗೆ ಅಂತ್ಯ ಸಂಸ್ಕಾರದ ವಿಧಿ-ವಿಧಾನಗಳನ್ನು ಧಿಕ್ಕರಿಸಿ, ತಮ್ಮ ದೇಹವನ್ನು ವೈದ್ಯ ಕಾಲೇಜಿಗೆ ಕೊಟ್ಟು ವೈದ್ಯ ವಿದ್ಯಾರ್ಥಿಗಳ ಅಧ್ಯಯನಕ್ಕೆ ವಸ್ತು ಆಕರವಾದರು. ತಮ್ಮ ಜಾನಪದ ಸತ್ವದ ದೇಹಕ್ಕೆ ವೈಜ್ಞಾನಿಕ ಸತ್ವ ನೀಡಿದರು. ಹೃದ್ರೋಗ ತೊಂದರೆಯಿಂದ ತೀವ್ರ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದ ಸಂಗಣ್ಣ ದಿನಾಂಕ ೨೯.೧೦.೨೦೦೮ರಂದು ನಿಧನರಾದರು. ಅವರಿಗೆ ೮೨ ವರ್ಷ ವಯಸ್ಸಾಗಿತ್ತು.

ತನ್ನನ್ನು ತಾನು ಎಲ್ಲೂ ಬಿಂಬಿಸಿಕೊಳ್ಳದೆ, ಜಾನಪದ, ಸಾಹಿತ್ಯ, ರಂಗಭೂಮಿಗೆ ತಮ್ಮ ಬದುಕನ್ನೇ ಮುಡುಪಾಗಿಸಿದ ಅಪರೂಪದ ಸಾಂಸ್ಕೃತಿಕ ವ್ಯಕ್ತಿತ್ವದ ಮುದೇನೂರು ಸಂಗಣ್ಣ ಇಂದಿನ ಯುವ ಜನಾಂಗಕ್ಕೆ ಆದರ್ಶವಾದವರು.

# ಗೌರವ ಪುರಸ್ಕಾರಗಳು

ಆಸಕ್ತಿ ಮತ್ತು ಕುತೂಹಲದಿಂದಾಗಿಯೇ ಜಾನಪದ ಸಾಹಿತ್ಯ, ಅಧ್ಯಯನ, ಸಂಗ್ರಹ, ಸಂಪಾದನೆ ಕಾರ್ಯದಲ್ಲಿ ನಿರತರಾದ ಇವರು ಸುಮಾರು ೨೩ ಪುಸ್ತಕಗಳನ್ನು ರಚಿಸಿದ್ದಾರೆ. ಒಂದೊಂದು ಕಾರಣಗಳಿಂದ ಈ ಎಲ್ಲ ಕೃತಿಗಳು ವೈಶಿಷ್ಟ್ಯಪೂರ್ಣವಾಗಿವೆ. ಜಾನಪದ ರಂಗಭೂಮಿಗಾಗಿ ಸೃಜನವಾಗಿ ಸೃಷ್ಟಿಸಿರುವ ನಾಟಕಗಳಿಗೆ ಐತಿಹಾಸಿಕ ಮಹತ್ವವಿದೆ. ಅಕಾಡೆಮಿಕ್ ವಿದ್ವಾಂಸರಿಗೂ ಸವಾಲಾಗಬಲ್ಲದು ಇವರ ವಿದ್ವತ್ ಪರಂಪರೆ. ವಚನಗಾರ್ತಿ ಸೂಳೆ ಸಂಕವ್ವಳ ಒಂದೇ ಒಂದು ವಚನದ ಆಧಾರ ಮೇಲೆಯೇ `ಸೂಳೆ ಸಂಕವ್ವ` ನಾಟಕ ರಚಿಸಿದ್ದು ಐತಿಹಾಸಿಕ ದಾಖಲೆ ಎನ್ನಬಹುದಾಗಿದೆ. ಇವರ ಇಂತಹ ವಿದ್ವತ್ ಪರಂಪರೆಯನ್ನು ಗುರುತಿಸಿಯೇ ನಾಡಿನ ಅಕಾಡೆಮಿಕ್ ಸಂಸ್ಥೆಗಳು ವಿಶ್ವವಿದ್ಯಾಲಯ, ಸರ್ಕಾರ ಪದವಿ, ಗೌರವಗಳನ್ನು ನೀಡಿವೆ.

ಇವರ ರಂಗಭೂಮಿಯ ಪ್ರತಿಭೆ, ಸಾಧನೆಯನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿಯು ಫೆಲೋಸಿಪ್‌ನ್ನು ೧೯೮೯ರಲ್ಲಿ ನೀಡಿದೆ. ಜಾನಪದ ಸಂಗ್ರಹ, ಸಂಪಾದನೆ, ವಿದ್ವತ್‌ನ್ನು ಕಂಡು ಕರ್ನಾಟಕ ಜಾನಪದ ಅಕಾಡೆಮಿಯು `ಜಾನಪದ ತಜ್ಞ` ೧೯೯೨ ಪ್ರಶಸ್ತಿಯನ್ನು ನೀಡಿದೆ. ಇವುಗಳ ಜೊತೆಗೆ ಕನ್ನಡ ಸಾಹಿತ್ಯದ ವಿದ್ವತ್‌ನ್ನು ಕಂಡು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ೨೦೦೧ರಲ್ಲಿ ನೀಡಿದೆ. ಇದಲ್ಲದೆ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಯನ್ನು ೨೦೦೨ರಲ್ಲಿ ನೀಡಿ ಗೌರವಿಸಿದೆ.

ಏಕೀಕರಣದ ಸಂದರ್ಭದಲ್ಲಿ ಹೋರಾಡಿ ಒಂದು ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿದ ಸಂಗಣ್ಣನವರ ನಾಡು-ನುಡಿಯ ಸೇವೆಯನ್ನು ಗುರುತಿಸಿದ ಸರ್ಕಾರ ಸುವರ್ಣ ಕರ್ನಾಟಕದ ಸಂದರ್ಭದಲ್ಲಿ `ಏಕೀಕರಣ ಪ್ರಶಸ್ತಿ`ಯನ್ನು ನೀಡಿ ಗೌರವಿಸಿದೆ. ಎಂ.ಪಿ. ಪ್ರಕಾಶ್‌ರ ಅಧ್ಯಕ್ಷತೆಯ ಸಮಿತಿಯು ಮುದೇನೂರು ಸಂಗಣ್ಣನವರನ್ನು ಆಯ್ಕೆ ಮಾಡಿತ್ತು. ಕನ್ನಡ ವಿಶ್ವವಿದ್ಯಾಲಯವು ಪ್ರತಿ ವರ್ಷ ಆಚರಿಸುವ `ನುಡಿಹಬ್ಬ`ದ ಸಂದರ್ಭದಲ್ಲಿ ಕರ್ನಾಟಕದ ಜನ, ಭಾಷೆ, ಸಾಹಿತ್ಯ, ಸಾಂಸ್ಕೃತಿಗಳ ಏಳಿಗಾಗಿ ದುಡಿದ ಮಹನೀಯರನ್ನು ಗುರುತಿಸಿ ಅವರಿಗೆ `ನಾಡೋಜ` ಎಂಬ ಗೌರವ ಪದವಿಯನ್ನು ನೀಡುತ್ತಾ ಬಂದಿದೆ. ನಮ್ಮ ಆದಿ ಕವಿ ಪಂಪನಿಗೆ ಸಂಬಂಧಿಸಿರುವ `ನಾಡೋಜ` ಎಂಬ ಶಬ್ದವು ಕರ್ನಾಟಕದ ಪರಂಪರೆಯ ಸಾಹಿತ್ಯವನ್ನು, ನಾಡನ್ನು ಕಟ್ಟಿದವರು ಎಂಬ ಮನ್ನಣೆಯನ್ನು ಸೂಚಿಸುವಂತದ್ದಾಗಿದೆ. ಇಂಥಹ ಪರಂಪರೆಯ `ನಾಡೋಜ` ಪದವಿಯನ್ನು ಮುದೇನೂರು ಸಂಗಣ್ಣನವರಿಗೆ ನೀಡಿ ಗೌರವಿಸಿದೆ.

ಬಳ್ಳಾರಿ ಜಿಲ್ಲಾ ೪ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೪ರಲ್ಲಿ ಹಡಗಲಿಯಲ್ಲಿ ನಡೆಯಿತು ಇದರ ಅಧ್ಯಕ್ಷರಾಗಿದ್ದವರು. ದಾವಣಗೆರೆ ಹೊಸ ಜಿಲ್ಲೆಯಾಗಿ ರಚನೆಯಾದಾಗ ದಾವಣಗೆರೆ ಜಿಲ್ಲಾ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯ ಗೌರವ. ಎರಡು ಜಿಲ್ಲೆಗಳ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಗೌರವವನ್ನು ಪಡೆದ ಹೆಗ್ಗಳಿಕೆ ಸಂಗಣ್ಣನವರದ್ದು. ೧೯೯೪ರಲ್ಲಿ ಧಾರವಾಡದಲ್ಲಿ ನಡೆದ ೨೧ನೇ ಅಖಿಲ ಕರ್ನಾಟಕದ ಜಾನಪದ ಸಮ್ಮೇಳನ ಅಧ್ಯಕ್ಷರಾದವರು.

ಅತ್ಯಂತ ಶ್ರಮಪಟ್ಟು ಸಿದ್ಧಪಡಿಸಿರುವ `ಚಿಗಟೇರಿ ಪದಕೋಶ`ಕ್ಕೆ ಅಂತರಾಷ್ಟ್ರೀಯ ದ್ರಾವಿಡ ಭಾಷಾ ವಿಜ್ಞಾನ ಪ್ರಶಸ್ತಿ ಲಭ್ಯವಾಗಿದೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ, ಉಮಾಪತಿ ಚುಕ್ಕೆ ಪ್ರತಿಷ್ಠಾನ ಪ್ರಶಸ್ತಿ, ಕನ್ನಡ ಸಿರಿ ಪ್ರಶಸ್ತಿ, ಮಹಾಲಿಂಗ ರಂಗ ಪ್ರಶಸ್ತಿ ಮೊದಲಾದವು ದೊರೆತಿವೆ. ಈ ಯಾವ ಪ್ರಶಸ್ತಿ ಪದವಿಗಳನ್ನು ಮುದೇನೂರು ಸಂಗಣ್ಣ ನಿರೀಕ್ಷಿಸಿದವರಲ್ಲ. ಆದರೆ ಬಂದ ಗೌರವಗಳನ್ನು ಅತ್ಯಂತ ವಿನಯದಿಂದ ಸ್ವೀಕರಿಸಿದ್ದಾರೆ.

ನಮ್ಮ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ತಾಯಿಬೇರಾದ ಜಾನಪದ ಕಲೆಗಳನ್ನು ಕುರಿತಂತೆ ನಾನು ತಳೆದಿರುವ ಸಕ್ರಿಯ ಆಸಕ್ತಿಯನ್ನೇ ಪ್ರೀತಿಯ ರನ್ನಗನ್ನಡಿಯಲ್ಲಿ ದೊಡ್ಡದಾಗಿ ಕಂಡು ಈ ಕನ್ನಡ ವಿಶ್ವವಿದ್ಯಾಲಯದ ಸಮಸ್ತರು ಒಮ್ಮನದಿಂದ ನನ್ನನ್ನು ಇಂದಿನ ಈ ನುಡಿಹಬ್ಬದಲ್ಲಿ ಮುಖ್ಯ ಭಾಷಣ ಮಾಡಲು ಬರಮಾಡಿಕೊಂಡಿದ್ದಾರೆ. ಅನಿರೀಕ್ಷಿತವಾಗಿ ಇವರು ನೀಡಿರುವ ಈ ಗೌರವ ನಮ್ಮ ಕನ್ನಡ ಜನಪದ ದೈವಕ್ಕೆ ಸಲ್ಲುತ್ತದೆ. ಅದರ ಪರವಾಗಿ ಮತ್ತು ನನ್ನ ಪರವಾಗಿ ವಿನೀತವಾಗಿ ನಾನು ಇವರೆಲ್ಲರಿಗೂ "ಶರಣುವಯ್ಯ" ಎನ್ನುತ್ತೇನೆ ಎಂದವರು.

# ಜಾನಪದ ಮತ್ತು ಸಾಹಿತ್ಯ

“ನಮ್ಮ ಜಗತ್ತೆಂಬ ಹಳ್ಳಿಯ ಬದುಕಿನಲ್ಲಿ ಮಾನವತೆ ಗಂಡಾಂತರದಲ್ಲಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಹೊಸ ಮುಖವಾಡಗಳ ಮರೆಯಲ್ಲಿ ಉಳ್ಳವರ ಸ್ವಾರ್ಥ ಶೋಷಣೆಗಳು ಕಾರುಬಾರು ನಡೆಸಿವೆ. ಜಾಗತಿಕ ಶಾಂತಿಗಾಗಿ ನಿಶ್ಶಸ್ತ್ರೀಕರಣ, ಆತ್ಮರಕ್ಷಣೆಗಾಗಿ ಶಸ್ತ್ರೀಕರಣ, ಧರ್ಮ ರಕ್ಷಣೆಯ ಹೆಸರಿನಲ್ಲಿ ಮತಾಂಧತೆಯ ವೈಭವೀಕರಣ ಇವುಗಳ ಅಟ್ಟಹಾಸಗಳು ಕರ್ಣಪಟಲಗಳನ್ನು ಛಿದ್ರಗೊಳಿಸುತ್ತದೆ. ಈ ಎಲ್ಲಾ ಅಮಾನುಷತ್ವದ ಭೀಕರತೆಯನ್ನು ತಿಳಿಸುವ ಮಾನವೀಕರಣತೆಯನ್ನು ಉದಾತ್ತೀಕರಿಸುವ ಮೇರು ಕಾರ್ಯವನ್ನು ಸಾಹಿತ್ಯ ಮತ್ತು ಕಲೆಗಳಿಂದ ಸಾಧಿಸಬೇಕಾಗಿದೆ”.

ಇದು ಸಂಗಣ್ಣರು ಸಾಹಿತ್ಯದ ಬಗ್ಗೆ ಇಟ್ಟುಕೊಂಡಿದ್ದ ಸದಾಶಯವಾಗಿತ್ತು. ಹಳ್ಳಿಯಲ್ಲಿದ್ದು ಆಧುನಿಕ ಜಗತ್ತಿನ ಪಲ್ಲಟಗಳು, ತಲ್ಲಣಗಳನ್ನು ಜಾಗತೀಕರಣದ ಪರಿಣಾಮಗಳು ನಮ್ಮ ಸ್ಥಳೀಯ ಕಲೆ, ಸಂಸ್ಕೃತಿ, ಪರಂಪರೆಯ ಮೇಲೆ ಬೀರಬಹುದಾದ ಅಪರಿಣಾಮಗಳ ಕುರಿತು ಚಿಂತಿಸುತ್ತಿದ್ದರು.

ಅವರ ಬೌದ್ಧಿಕ ಹಸಿವು, ಅವರನ್ನು ಜಾನಪದದ ಸಂಗ್ರಹ, ಅಧ್ಯಯನ, ಜಾನಪದ ರಂಗಭೂಮಿಯ ಆಳಕ್ಕೆ ಇಳಿಸಿತು. ಮೂಲತಃ ಕವಿ ಸ್ವಭಾವದ ಇವರು, ಸಾಹಿತ್ಯಾಸಕ್ತಿ ಬೆಳೆದಾಗ `ನವೋದಯ`ದ ಕಾಲಘಟ್ಟ. ಮುಂದೆ ಕನ್ನಡದ ನವ್ಯ, ದಲಿತ, ಬಂಡಾಯ ಈ ಎಲ್ಲ ಸಾಹಿತ್ಯ ಪ್ರಕಾರಗಳ ಅಧ್ಯಯನದಲ್ಲಿ ನಿರತರಾಗಿದ್ದವರು. ಬಸವಣ್ಣ, ಗಾಂಧಿ, ಅರವಿಂದ, ಲೋಹಿಯಾ, ಅಂಬೇಡ್ಕ ವಿಚಾರಧಾರೆಗಳನ್ನು ಅರಿತವರಾಗಿದ್ದರು. ಈ ಪ್ರಭಾವದ ಹಿನ್ನೆಲೆಯಲ್ಲೇ ಅವರು ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ತಮ್ಮ ಅಧ್ಯಯನ, ಬರವಣಿಗೆಯನ್ನು ಮಾಡಿದ್ದಾರೆ.

೧೯೪೫ರಿಂದಲೇ ಕವಿತೆಗಳನ್ನು ಬರೆದಿದ್ದಾರೆ. ಇವರ ಮೊದಲ ಕವಿತೆಯಿಂದ ಹಿಡಿದು ಬಹಳಷ್ಟು `ಜಯಂತಿ`ಯಲ್ಲಿ ಪ್ರಕಟವಾಗಿವೆ. ಲಂಕೇಶರು ಹೊಸಗನ್ನಡ ಕಾವ್ಯದ ಬಗ್ಗೆ ಪುಸ್ತಕ ತಂದಾಗ, ಮಾಹಿತಿಯ ಕೊರತೆಯಿಂದಲೋ, ಉಪೇಕ್ಷೆಯಿಂದಲೋ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಯಾವಬ್ಬ ಕವಿಯ ಕವಿತೆಗಳು ಆ ಕವನ ಸಂಕಲನದಲ್ಲಿ ಇರಲಿಲ್ಲ. ಆಗ ಶಾಂತರಸರ ಸಂಪಾದಕತ್ವದಲ್ಲಿ `ಬೆನ್ನ ಹಿಂದಿನ ಬೆಳಕು` ಎನ್ನುವ ಈ ಭಾಗದ ಕವಿತೆಗಳ ಕವನ ಸಂಕಲನವನ್ನು ಹೊರತಂದಾಗ ಸಂಗಣ್ಣನವರ ಬಹಳಷ್ಟು ಕವಿತೆಗಳು ಇದರಲ್ಲಿ ಪ್ರಕಟಗೊಂಡವು. ಬಿಡಿಬಿಡಿಯಾಗಿ ಹಲವಾರು ಕವಿತೆಗಳು ಸಹ ಪ್ರಕಟವಾಗಿವೆ. ಆದರೆ ಇವರು ಕವಿಯಾಗಿ ಗುರುತಿಸಿಕೊಳ್ಳಲಿಲ್ಲ. ಏಕೆಂದರೆ ಇವರಿಗೆ ಕವಿತೆ ಬರೆಯುವುದು ಮುಖ್ಯವಾಗಿರಲಿಲ್ಲ. ಅವರ ಸಾಹಿತ್ಯ, ಸಾಂಸ್ಕೃತಿಕ ಅಭಿವ್ಯಕ್ತಿ ಜಾನಪದದ ನಾಟಕ, ರಂಗಭೂಮಿ, ಜಾನಪದ ರಂಗಭೂಮಿಯತ್ತ ಕೇಂದ್ರಿತವಾಯಿತು.

ಜಾನಪದತ್ತ ಆಕರ್ಷಿತರಾಗಿ, ಆಸಕ್ತಿ ಬೆಳೆದದ್ದು ೧೯೪೭ರಲ್ಲಿ. ಇವರು ಮೊದಲ ಸಲ ಗರತಿಯ ಹಾಡು ಪುಸ್ತಕ ನೋಡಿದಾಗ, `ನಮ್ಮ ಹಳ್ಳಿಯ ಜನರ ಜಾನಪದ ಸಾಹಿತ್ಯಿಕವಾಗಿ ಪರಿಗಣಿಸಲ್ಪಡುತ್ತದೆಯಲ್ಲ ಎಂದು ಅದರತ್ತ ಮುಖಮಾಡಿದರು. ಆ ದಾರಿಯಲ್ಲಿ ಬಹುದೂರ ಕ್ರಮಿಸಿದರು. ಇವರ ಜಾನಪದ ಎಲ್ಲದಕ್ಕೂ `ಗರತಿಯ ಹಾಡು` ಪ್ರೇರಣೆಯನ್ನು ತಂದಿತ್ತು. ಮುಂದೆ ಹಲಸಂಗಿ ಗೆಳೆಯರ ಗುಂಪು ಸಹ ಸ್ಫೂರ್ತಿ ಪ್ರೇರಣೆಯನ್ನು ನೀಡಿತು. ಇದರಿಂದ ಸಾಹಿತ್ಯ ಸಂಗ್ರಹ ಕಾರ್ಯ ಆರಂಭಗೊಂಡಿತ್ತು.

ಇವರು ಬೇರೆ ಊರಿಗೆ ಹೋದಾಗ-ಬಂದಾಗ ಜಾನಪದವನ್ನು ಆಸಕ್ತಿಯಿಂದ ಸಂಗ್ರಹಿಸುತ್ತಿದ್ದರು. ಇವರು ಹರಿಹರದಲ್ಲಿ ಮದುವೆಯಾದ ಮೇಲೆ, ಮಾವನ ಮನೆಯವರಿಗೂ ಹಾಗೂ ಅಲ್ಲಿನ ಮಿತ್ರರಿಗೂ ಹೇಳಿ ಸಂಗ್ರಹದ ಕೆಲಸ ಮಾಡಿದರು. ಹೀಗೆ ಸಂಗ್ರಹದಲ್ಲಿ ದಾಖಲಾದ ತ್ರಿಪದಿಗಳನ್ನು ಮಾತ್ರ ಪ್ರಕಟಿಸಿದರು. ನಂತರ ಕೆ. ವಿರೂಪಾಕ್ಷ ಗೌಡರ ಜೊತೆಗೆ `ಹಳ್ಳಿಯ ಪದಗಳು` ಅಂತ ಪ್ರಕಟಿಸಿದರು. ಇವರು ಜಾನಪದ ಸಾಹಿತ್ಯವನ್ನು ದಾಖಲು ಮಾಡಲು ಆಗ ತಾನೇ ಮಾರುಕಟ್ಟೆಗೆ ಬಂದಿದ್ದ `ಗ್ರೌಂಡಿಸ್ ಟೇಪ್ ರೆಕಾರ್ಡ್`ನ್ನು ಖರೀದಿಸಿದರು. ಅದನ್ನು ಎತ್ತಿನ ಬಂಡಿಯಲ್ಲಿ ಇಟ್ಟುಕೊಂಡು ಹಳ್ಳಿಗಳಿಗೆ ಹೋಗಿ ಅದರಿಂದ ಸಾಹಿತ್ಯವನ್ನು

ಸಂಗ್ರಹಿಸುತ್ತಿದ್ದರು. ಇದರಿಂದ ಅನೇಕ ಹಾಡು, ಕಥನ ಗೀತೆಗಳನ್ನು ಸಂಗ್ರಹಿಸಿದರು. ನೂರಾರು ಗಂಟೆಗಳ ಕಾಲ ಕೇಳಬಹುದಾದ ಜಾನಪದ ಕಥೆ, ಹಾಡು ಇವರ ಸಂಗ್ರಹದಲ್ಲಿದೆ.

ಜಾನಪದ ಸಂಗ್ರಹದ ಜೊತೆಗೆ ಅವರೆ ನಾಟಕಗಳನ್ನು ಬರೆದರು. ಅವುಗಳೆಂದರೆ `ಚಾತಿ ಚಂದ್ರ`, `ಬಂಗಾರದ ತಟ್ಟೆ`, `ಜನ ಅರಣ್ಯ`, `ಮೋಚಿಮಾಮ`, `ಅಂಗುಲಿಮಾಲ`, `ಸೂಳೆ ಸಂಕವ್ವ`, `ಅವ್ವೆಣ್ಣೆವ್ವ` ಗೊಂದಲಿಗರ ಕಥಾ ಪ್ರಸಂಗದ ನಾಟಕ ರೂಪ `ಶೀಲಾವತಿ`, `ಬಾಳ ಭಿಕ್ಷುಕ`, `ಚಿತ್ರ ರಾಮಾಯಣ`, `ಲಕ್ಷ್ಮಿಪತಿ ರಾಜನ ಕಥೆ`, `ರಸರಾಳ ರಾಜನ ಕಥೆ`, `ಬುದ್ಧಬಾಲ` ಮೊದಲಾದ ಜಾನಪದ ರಂಗಭೂಮಿಗೆ ಸಂಬಂಧಿಸಿದ ನಾಟಕಗಳನ್ನು ಸೃಜನ ಮಾಡಿ ಜಾನಪದ ರಂಗಭೂಮಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಇವರು ನೀಡಿದ್ದಾರೆ.

ಜನಪದ ಮುಕ್ತಕಗಳು, ಗೊಂಬಿಗೌಡರ ಸೂತ್ರದ ಆಟಗಳು, ಗೊಂದಲಿಗರ ದೇವೇಂದ್ರಪ್ಪನ ಆಟಗಳು, ಜಾನಪದದ ಇತರೆ ಕೃತಿಗಳು. ಜಾನಪದದ ಹಾಡು, ಸಾಹಿತ್ಯ, ಸಂಗ್ರಹ ಪ್ರಕಟಣೆಯಲ್ಲಿ ತೊಡಗಿರುವಾಗಲೇ ಅವರು ಸುಭೋದ್ ಘೋಷರ ಬಂಗಾಳಿ ಕಥೆಗಳ ಕಡೆ ಆಕರ್ಷಿತರಾದರು. ಬಂಗಾಲಿ ಕಥೆಗಳನ್ನು ಓದುಬೇಕೆನ್ನುವ ಆಸೆಯಿಂದಲೆ ಅವರು ಬಂಗಾಲಿ ಕಲಿತರು. ಭಾಷೆಯನ್ನು ಕಲಿಯಲು ಈಗಿನಂತೆ ಸೌಲಭ್ಯಗಳು ಇಲ್ಲದ ಕಾಲದಲ್ಲಿಯು ಅವರು ಸ್ವ-ಇಚ್ಛೆಯಿಂದಲೇ ಬಂಗಾಲಿ, ಇಂಗ್ಲೀಶ್ ಪದಕೋಶಗಳ ಸಹಾಯದಿಂದ ಬಂಗಾಲಿಯನ್ನು ಕಲಿತು, ಬಂಗಾಲಿ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಸುಭೋದ್, ಘೋಷರ ೧೮ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ತಂಬಾಕಿನ ವ್ಯಾಪಾರದ ನಂಟಿನಿಂದ ನಿಪ್ಪಾಣಿಯೊಂದಿಗೆ ಇದ್ದ ಸಂಪರ್ಕದಿಂದಲೇ ಅವರು ಮರಾಠಿ ಭಾಷೆಯನ್ನು ಕಲಿತ್ತಿದ್ದರು. ಭಾಷೆಯನ್ನು ಕೇವಲ ವ್ಯವಹಾರಕ್ಕೆ ಬಳಸದೆ, ಮರಾಠಿಯ ಸಾಹಿತ್ಯ-ಸಂಗೀತದತ್ತ ಗಮನಹರಿಸಿದರು. ಇದರಿಂದಾಗಿ `ಘಾಶೀರಾಮ ಕೊತ್ವಾಲ` ಮರಾಠಿ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಇವರ `ಸೂಳೆ ಸಂಕವ್ವ` ಕೆಲವು ಕಾರಣಗಳಿಂದಾಗಿ ಮಹತ್ವ ಪಡೆದ ನಾಟಕ. `ಸೂಳೆ ಸಂಕವ್ವ` ೧೨ನೆಯ ಶತಮಾನದ ಒಬ್ಬ ವಚನಗಾರ್ತಿ. ಈ ವರೆಗೆ ಅವಳದು ಒಂದೇ ಒಂದು ವಚನ ಲಭ್ಯವಿದೆ. "ಬತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ. ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ…." ಈ ವಚನ ಆಧಾರದ ಮೇಲೆಯೇ ಸಂಗಣ್ಣನವರು ತಮ್ಮದೇ ಆದ ದೃಷ್ಟಿಯಲ್ಲಿ ಪರಭಾವಿಸಿಕೊಂಡು ನಾಟಕ ರಚನೆ ಮಾಡಿದ್ದಾರೆ. ಸೂಳೆತನದ ಕೋಟೆಯನ್ನು ದಾಟಲು ಯತ್ನಿಸಿದ ಸಂಕವ್ವ ಎದುರಿಸಿದ ಕಷ್ಟ-ಪ್ರತಿರೋಧ ಇದರಿಂದ ಸಂಭವಿಸಿದ ಘರ್ಷಣೆಗಳು ನಾಟಕದಲ್ಲಿ ಅರ್ಥವತ್ತಾಗಿ ಬಿಂಬಿತವಾಗಿದೆ. ದೊರೆತ ಒಂದೇ ಒಂದು ವಚನದ ಆಧಾರದ ಮೇಲೆ ರಚನೆಯಾದ ನಾಟಕಕ್ಕೆ ಐತಿಹಾಸಿಕ ಮಹತ್ವವಿದೆ. ಸಾಣೇಹಳ್ಳಿಯ `ಶಿವಸಂಚಾರ` ಇವರು ಈ ನಾಟಕವನ್ನು ರಂಗದ ಮೇಲೆ ಪ್ರಯೋಗಿಸಿದ್ದಾರೆ.

`ಗೊಂದಲಿಗರ ದೇವೇಂದ್ರಪನ ಆಟಗಳು` ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ, ಪ್ರಕಟಿಸಿದೆ. ಸ್ಥಿತ್ಯಂತರಗೊಳ್ಳುವ ಕಾಲದೊಂದಿಗೆ ಮುಖಾಮುಖಿಯಾಗುತ್ತಿದ್ದಂತೆಯೇ ಜಾನಪದ ಕಲೆಗಳು ಬದಲಾಗುತ್ತಿದ್ದರೂ `ದೇವೇಂದ್ರಪ್ಪನಂಥ ಒಬ್ಬ ಕಲಾನಿಷ್ಠ ಬದುಕಿನ ಜೀವನಾನುಭವ ನಿಷ್ಠೆ ತೋರಿಸುತ್ತಿರುವುದನ್ನು ಸಂಗಣ್ಣನವರು ಗುರುತಿಸಿದ್ದರು. ೬೬ ಪುಟಗಳ ಪೀಠಿಕೆಯಲ್ಲಿ, ಗೊಂದಲಿಗರದು "ಕತೆಯಲ್ಲ ಆಟ" ಎಂದು ತೋರಿಸುವ ಮತ್ತು ಒಂದು ಜಾನಪದ ಕಲೆ, ಭಾಷೆ, ಪ್ರದೇಶ, ಜನಾಂಗ, ಧರ್ಮ ಇತ್ಯಾದಿಗಳನ್ನು ಮೀರಿ ಬದುಕನ್ನು ಕಲಾತ್ಮಕವಾಗಿ ಕಾಣುವ ಹಿನ್ನೆಲೆಯಲ್ಲಿ ದುಡಿಯುತ್ತದೆ ಎಂಬುದನ್ನು ಪ್ರಮೇಯಾತ್ಮಕ ವಿಶ್ಲೇಷಣೆಯ ಮೂಲಕ ತಿಳಿಸುತ್ತಾರೆ. `ಗೊಂದಲಿಗರ ಕಥೆ` ನಿಜಾರ್ಥದಲ್ಲಿ ಅದು ಕತೆಯಲ್ಲ, ಆಟ ಎಂದು ಮನನ ಮಾಡುವಾಗ ಅವರು ಈ ಕಲಾಪ್ರಕಾರಕ್ಕಿರುವ "ವಾಕ್ಸಂಪ್ರದಾಯ, ಕಥೆಯ ಕತೆ, ಕಥಾಕೀರ್ತನ, ಪೌರಾಣಿಕ-ಕಾಲ್ಪನಿಕ ಕಥಾ ಸಂಬಂಧ, ಗದ್ಯಪದ್ಯ, ಕಥನಗಳು, ಗೊಂದಲಿಗರ ಕಲ್ಪನಾವಿಲಾಸ, ಗೊಂದಲಿಗರು, ಕಿನ್ನರಿ-ಗೊಂದಲಿ ಜೋಗಿಗಳು, ಗೊಂದಲಿ-ಕರ್ನಾಟಕದಲ್ಲಿ, ಬೆಳಗಾವಿ ವಿಭಾಗದಲ್ಲಿ, ಕರಾವಳಿ ಭಾಗದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ, ಆಂಧ್ರ ಪ್ರದೇಶದಲ್ಲಿ, ಕರ್ನಾಟಕ-ಮಹಾರಾಷ್ಟ್ರ

ಸಂಬಂಧ, ಭಾಷಾ ಬಾಂಧವ್ಯ ಗೊಂದಲ-ಮಹಾರಾಷ್ಟ್ರ ಕಥೆಯಲ್ಲಿ ಆಟ ರಂಗಸ್ಥಳ ಕಥೋದ್ದೇಶ, ಕಥಾ ಬಾಂಧವ್ಯಗಳು, ಕಥಾವಸ್ತುಗಳ ಹೆಸರು, ಇವನ್ನು ಬಳಸಿಕೊಳ್ಳುವ ವಿವಿಧ ಕಲಾವಿದರು, ಕಿನ್ನರಿ ಜೋಗಿಗಳು-ಗೊಂದಲಿಗರು...." ಹೀಗೆ ಸಂಗಣ್ಣನವರು ನೀಡುವ ಐವತ್ತೆರಡು ಉಪಶೀರ್ಷಿಕೆಗಳು ಅಧ್ಯಯನದ ಆಳ, ಗ್ರಹಿಕೆಯ ಸ್ಪಷ್ಟತೆಯನ್ನು ಹೇಳುತ್ತದೆ.

`ಶೀಲಾವತಿ` ಗೊಂದಲಿಗರ ಕಥಾ ಪ್ರಸಂಗದ ನಾಟಕ ರೂಪ. ಒಂದು ಜಾನಪದ ಕಥಾನಕವನ್ನು ಆಧುನಿಕ ನಾಟಕವನ್ನಾಗಿಸಿದವರು ಮುದೇನೂರು ಸಂಗಣ್ಣನವರು. ಜಾನಪದ ರಂಗಭೂಮಿಯ ಸಿದ್ಧ ಹಸ್ತರಾಗಿದ್ದ ಇವರಿಗೆ ಮಾತ್ರ ಇಂಥ ಪ್ರಯೋಗವನ್ನು ಮಾಡಲು ಸಾಧ್ಯವಾಗಿದ್ದು ಹಾಗೂ ಆ ನಿಟ್ಟಿನಲ್ಲಿ ಯಶಸ್ವಿಯಾದವರು. ಇದನ್ನು ಮರಿಯಮ್ಮನಹಳ್ಳಿಯ ಲಲಿತಕಲಾ ರಂಗದ ಕಲಾವಿದರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿಯೂ ಇದನ್ನು ಪ್ರದರ್ಶಿಸಿದ್ದಾರೆ. ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು ಜನಪ್ರಿಯ ನಾಟಕವಾಗಿ ಹೆಸರು ಪಡೆದುಕೊಂಡಿದೆ. ಲಲಿತಕಲಾ ರಂಗವು ಸಹ ಈ ನಾಟಕದಿಂದ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿತು.

ಒಂದು ಜನಪದ ಗೀತೆಯನ್ನಾಧರಿಸಿ ರಚಿಸಿದ ನಾಟಕ `ಅವ್ವಣ್ಣೆವ್ವ` ಜನಪದ ಗೀತೆಯ ಮೂಲ ಕಥೆಯನ್ನು ವಿಸ್ತರಿಸಿ ಒಂದು ಅರ್ಥಪೂರ್ಣವಾದ ನಾಟಕವನ್ನು ಸಂಗಣ್ಣನವರು ರಚಿಸಿದ್ದಾರೆ. ಒಂದು ಹಳ್ಳಿಯಲ್ಲಿ ನಡೆದ ಅಂತರ್ಜಾತೀಯ ಪ್ರೇಮ ಪ್ರಕರಣ ವಿವಿಧ ಆಯಾಮಗಳನ್ನು ಪಡೆದುಕೊಳ್ಳುವುದನ್ನು ಇದು ಚಿತ್ರಿಸುತ್ತದೆ. ಅವ್ವಣ್ಣೆವ್ವ ಬೇರೆ ಜಾತಿಯ ಬಡವನಾದ ಯುವಕನನ್ನು ಪ್ರೀತಿಸುತ್ತಾಳೆ. ಅವರ ಅಣ್ಣಂದಿರು ಅದಕ್ಕೊಪ್ಪದೇ ಸ್ವಜಾತಿಯ ವರನೊಂದಿಗೆ ಮದುವೆ ನಡೆಯುತ್ತದೆ. ಗಂಡ ಅಲ್ಪಾಯುಷಿ. ತರುಣ ವಿಧವೆ ಅವ್ವಣ್ಣೆವ್ವನನ್ನು ಮೊದಲಿನ ಪ್ರೇಮಿ ಮದುವೆ ಮಾಡಿಕೊಂಡು ಊರು ಬಿಡುತ್ತಾನೆ. ಪ್ರೇಮ ಜೀವನವನ್ನು ಧಿಕ್ಕರಿಸಿದ ಊರಿಗಿಂತ ನಿರ್ಜನವಾದ ಕಾಡು ಲೇಸೆಂದು ಭಾವಿಸಿ ಅಡವಿ ಸೇರುತ್ತಾರೆ. ಮಗು ಹುಟ್ಟಿದ ಮೇಲೆ ಕಾಡಿನ ಜೀವನ ಬೇಸರ ತರಿಸುತ್ತದೆ. ಸಮಾಜವಿಲ್ಲದೆ ಬದುಕು ಅಸನೀಯವೆಂಬ ವೇದನೆ ಸಂಗಣ್ಣನವರದ್ದಾಗಿದೆ. ಅವ್ವಣ್ಣೆವ್ವ ಗಂಡ ಮಗನೊಂದಿಗೆ ಪುನಃ ಊರಿಗೆ ಬರುತ್ತಾಳೆ. ಸಂಘಜೀವಿಯಾದ ಮನುಷ್ಯ ಸಮಾಜವಿಲ್ಲದೆ ಬದುಕಲು ಅಸಾಧ್ಯವೆಂಬ ತಿರ್ಮಾನದಿಂದಾಗಿ ಸಂಗಣ್ಣನವರು ಈ ನಾಟಕವನ್ನು ರಚಿಸಿದ್ದಾರೆ.

ಕಿನ್ನರಿ ಜೋಗಿಗಳ ಕಥಾಪ್ರಸಂಗವನ್ನು ವಿವರಿಸುವ ನಾಟಕ `ಲಕ್ಷಾಪತಿ ರಾಜನ ಕಥೆ`. ಕಿನ್ನರಿ ಜೋಗಿಗಳ ರಂಜನೀಯ ವೃತ್ತಿಜನ್ಮ ಕಥೆಗಾರಿಕೆಯ ತಂತ್ರವನ್ನೇ ಬಳಸಿಕೊಂಡು ಇದನ್ನು ರಂಗರೂಪಕ್ಕೆ ಅಳವಡಿಸಲಾಗಿದೆ. ನಿರ್ದೇಶಕಿ-ನಟಿ ಬಿ. ಜಯಶ್ರೀ `ಲಕ್ಷಾಪತಿ ರಾಜನ ಕಥೆ`ಯನ್ನು ರಂಗರೂಪಕ್ಕೆ ಅಳವಡಿಸಿದ್ದಾರೆ. ಮೂಲ ಕಲೆಯ ಶೈಲಿ ಸತ್ವಗಳನ್ನು ಹಾಡಿನ ದಾಟಿಗಳನ್ನು ಉಳಿಸಿಕೊಂಡು ಕಥಾವಸ್ತುವನ್ನು ಇನ್ನಷ್ಟು ಪುಷ್ಟಗೊಳಿಸಿ ಪ್ರದರ್ಶನ ನೀಡಲಾಗಿದೆ. ಅಭಿನಯ, ಗತ್ತಿನ ಹೆಜ್ಜೆ, ರಂಗ ರಚನೆಗಳನ್ನು ಬಳಸಿ ಅನ್ಯ ಭಾಷಾ ಪ್ರೇಕ್ಷಕರಿಗೆ ಭಾಷೆಯ ತೊಡಕೇ ಅನುಭವಕ್ಕೆ ಬಾರದಂತೆ ನಿರ್ದೇಶಿಸಿದ್ದಾರೆ. ಸೂತ್ರದ ಗೊಂಬೆ ಆಟ ಒಂದು ಪ್ರಾಚೀನ ಜಾನಪದ ಕಲೆ, ಸಮೂಹ ಮಾಧ್ಯಮದ ಕಲೆಯಾಗಿ ಪ್ರೇಕ್ಷಕರ ಮೇಲೆ ಗಮನಾರ್ಹ ಪರಿಣಾಮವನ್ನಿಟ್ಟು ಮಾಡಿದ್ದ ಪ್ರದರ್ಶನ ಕಲೆ. ಈ ಕಲೆಯನ್ನು ಸಂಗಣ್ಣನವರು `ರಾತ್ರಿ ಸಾಲಿ` ಎಂದೇ ಕರೆದಿದ್ದಾರೆ.

ಕಂಠಸ್ಥವಾಗಿದ್ದ ಸೂತ್ರದ ಗೊಂಬೆಯಾಟದ ಪ್ರಸಂಗಗಳನ್ನು ಸಂಪಾದಿಸಿರುವ ಕೃತಿಯೇ `ಗೊಂಬೀಗೌಡರ ಸೂತ್ರದ ಗೊಂಬೆ ಆಟಗಳು`. ಈ ಕೃತಿಯಲ್ಲಿ `ರಾವಣ ವದಾ`, `ಅಭಿಮನ್ಯು ವದಾ` ಈ ಎರಡು ಆಟಗಳನ್ನು ಸಂಪಾದಿಸಿದ್ದಾರೆ. ಗೊಂಬೆ ಆಟದವರು ಆಡುವ ಭಾಷೆಯನ್ನು ಹಾಗೇ ಉಳಿಸಿಕೊಳ್ಳುವ ಮೂಲಕ ಸಂಪಾದಕರು ಆಟಗಳ ರಂಗ ಸಂಭಾಷಣೆಯ ಕಲಾತ್ಮಕತೆಯನ್ನು ಸಂರಕ್ಷಿಸಿದ್ದಾರೆ. ಈ ಬಗ್ಗೆ ಸಾಹಿತ್ಯದ ಅನರೂಪ, ಕಾಲದ ಧೂಳಿನಲ್ಲಿ ಮರೆಯಾಗಿ ಹೋಗುತ್ತಿದ್ದ ಈ ಕಂಠಸ್ಥ ಆಟ ಪ್ರಸಂಗಗಳನ್ನು ಗ್ರಂಥಸ್ಥಗೊಳಿಸಿ ಜಾನಪದ ಕ್ಷೇತ್ರಕ್ಕೆ ಉಪಯುಕ್ತವಾದ ಕಾರ್ಯವನ್ನು ಮಾಡಿದ್ದಾರೆ. `ಗೊಂಬೀಗೌಡರ ಸೂತ್ರದ ಗೊಂಬೆ ಆಟಗಳು` ಇದನ್ನು ಕನ್ನಡ ಸಾಹಿತ್ಯ ಪರಿಷತ್ತು ೧೯೯೫ರಲ್ಲಿ ಪ್ರಕಟಿಸಿದೆ.

ಇವರ ಬಿಡಿ ಕವಿತೆಗಳನ್ನು ಒಟ್ಟಿಗೆ ಸೇರಿಸಿ `ಆ ಅಜ್ಜ ಈ ಮೊಮ್ಮಗ` ಕವನ ಸಂಕಲನ ಪ್ರಕಟಿಸಲಾಗಿದೆ. ೧೯೪೫ರಿಂದ ೨೦೦೦ ವರೆಗಿನ ಅವಧಿಯಲ್ಲಿ ಪ್ರಕಟಗೊಂಡ ಇವರ ಕವಿತೆಗಳ ಸಂಕಲನ ಇದಾಗಿದೆ.

`ಆ ಅಜ್ಜ ಈ ಮೊಮ್ಮಗ` ಇವರ ಕವನಗಳ ಸಂಕಲನ ನವೋದಯದ ಎಲ್ಲ ಕವಿತೆಗಳಂತೆ ಸಂಗಣ್ಣನವರು ನಿಸರ್ಗದ ಚೆಲುವಿಗೆ ಕೌತುಕಕ್ಕೆ ಮನ ಸೋತಿದ್ದಾರೆ. ಅದರ ಬೆಡಗು ಭಿನ್ನಾಣಗಳನ್ನು ಅಚ್ಚರಿಯಿಂದ ವರ್ಣಿಸುತ್ತಲೇ ನಿಸರ್ಗ-ಮನುಷ್ಯ ಸಂಬಂಧದ ಅನ್ವೇಷಣೆಗೂ ತೊಡಗುತ್ತಾರೆ. ಕವಿತೆಗಳಲ್ಲಿ ಅಂತರ್ ವಾಹಿನಿಯಾಗಿ ಹರಿದು ಬರುವ ಭಾವುಕತನ ವೈಚಾರಿಕತೆಯೊಂದಿಗೆ ಸಂಲಗ್ನಗೊಂಡಿರುವುದನ್ನು ಕಾಣಬಹುದಾಗಿದೆ. ಸಂಗಣ್ಣನವರು ಭಾವುಕತನದಲ್ಲಿ ಮೈಮರೆಯದೆ ಲೌಕಿಕ ಬದುಕನ್ನು ತೆಕ್ಕೆಯಲ್ಲಿ ಹಿಡಿದುಕೊಳ್ಳುತ್ತಾರೆ. ಬದುಕಿನ ವಾಸ್ತವತೆಯನ್ನು ದೃಢೀಕರಿಸುತ್ತ ಅದಕ್ಕೆ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ. ಅವರ ಪಾಲಿಗೆ ಕವಿತೆಯೆಂಬುದು ಬದುಕಿನ ವ್ಯಾಖ್ಯಾನ-ನಿರೂಪಣೆ-ಸಮರ್ಥನೆ-ದರ್ಶನ ಎಲ್ಲವೂ ಆಗಿದೆ. ಹಾಗಂತ ಅವರ ಕಾವ್ಯ ಲೌಕಿಕದ ಪರಿಧಿಯಲ್ಲಿ ಗಿರಕಿಹೊಡೆಯಲಾರದು. ಲೌಕಿಕದಾಚೆಯ ಏನನ್ನೋ ಸ್ಪರ್ಶಿಸುವ ದರ್ಶಿಸುವ ತುಡಿತ ಎದ್ದುಕಾಣುತ್ತದೆ. ಸಂಗಣ್ಣನವರ ಕವಿತೆಗಳಲ್ಲಿರುವ ತಣ್ಣನೆಯ ಬಂಡಾಯ ಮನೋಜ್ಞವಾಗಿದೆ. ಅಮಾನವೀಯ ಮೌಢ್ಯಗಳನ್ನು ಧಿಕ್ಕರಿಸುತ್ತ ಪರಂಪರಾಗತ ಮೌಲ್ಯಗಳನ್ನು ಪ್ರತಿಪಾದಿಸುವರು. ಎಚ್ಚರದಿಂದ ನಡೆಸುವ ಮೌಲ್ಯಗಳ ಅನ್ವಯಿಕೆಯಲ್ಲಿ ಕಂದಾಚಾರವಿರುವುದಿಲ್ಲ. ಲೋಕಾನುಭವ ಮತ್ತು ಸ್ವಾನುಭಾವಗಳ ಅಮಿತಶಕ್ತಿ ಅವರ ಕವಿತೆಗಳ ಆರೋಗ್ಯ ವರ್ದಿಸಿದೆ. ಸದಾ ಮಾನವತೆಗಾಗಿ ಹಂಬಲಿಸುವ ಸಂಗಣ್ಣನವರ ವಿಡಂಬನೆ ಅತ್ಯಂತ ನಾಜೂಕಾದುದು, ಸ್ವಗತ ಸಂಭಾಷಣೆಯ ರೂಪದಲ್ಲಿರುವಂಥದು. ಅಸಮಾನತೆ, ಶೋಷಣೆ, ಅನೈತಿಕತೆ, ಭ್ರಷ್ಟಾಚಾರಗಳಿಂದ ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲಿರುವ ಸಂಗಣ್ಣನವರ ಕವಿತೆಗಳಲ್ಲಿ ಆಶಾವಾದದ ಬೆಳಕಿದೆ. ಇತ್ತೀಚೆಗೆ ಅವರು ಹಲವಾರು ಕಥನ ಕವನಗಳನ್ನು ರಚಿಸಿದ್ದಾರೆ. ಅಲ್ಲಿಯ ಬಹಳಷ್ಟು ಕಥಾನಕಗಳು ಸುಪರಿಚಿತ. ಆದರೂ ಪ್ರಥಮ ಸಲ ಪರಿಚಯಿಸುವ ಉತ್ಸಾಹದಲ್ಲಿ ಸಂಗಣ್ಣನವರು ನಿರೂಪಿಸಿಸುತ್ತಾರೆ. ಅವುಗಳಲ್ಲಿ ತಮ್ಮದೇ ಆದ ಹೊಸ ಅರ್ಥ ತುಂಬುತ್ತಾರೆ. ಆ ಅರ್ಥದ ಮೂಲಕ ಧ್ವನಿಶಕ್ತಿ ಸ್ಥಾಪಿಸುತ್ತಾರೆ. ಅವು ತಮ್ಮಲ್ಲಿ ಅಡಗಿಸಿಕೊಂಡಿರುವ ನೀತಿ ಬೋಧೆಗಳನ್ನು ತೆರೆದಿಡುತ್ತ ಪುನರ್ಮನನದ ಅನುಭವ ನೀಡುತ್ತವೆ. ಸಂಗಣ್ಣನವರ ಕಾವ್ಯಭಾಷೆ ವಿಶಿಷ್ಟವಾದುದು. ನಡುಗನ್ನಡ ಕಾವ್ಯ-ವಚನಸಾಹಿತ್ಯ-ನವೋದಯ ಕಾವ್ಯಗಳ ಆಳವಾದ ಅಧ್ಯಯನದ ಫಲವಾಗಿ ಪಾಕಗೊಂಡಿರುವ ಅವರ ಕಾವ್ಯಭಾಷೆಯ ಸೊಗಸೇ ಬೇರೆ. ಕವಿತೆಗಳ ಸಾಲುಸಾಲುಗಳಲ್ಲಿ ಇದು ವ್ಯಕ್ತವಾಗುತ್ತದೆ. ಒಟ್ಟಾರೆ ಸಂಗಣ್ಣನವರ ಕಾವ್ಯವನ್ನು ಸಮೀಕ್ಷಿಸಿದ ಮೇಲೆ "ಸಂಗಣ್ಣನವರು ಕವಿತೆಯ ರಚನೆಯನ್ನೇ ಮುಖ್ಯವಾಗಿಟ್ಟುಕೊಂಡು ಕಾವ್ಯೋದ್ಯೋಮಿ ಕವಿಯಲ್ಲ. ಅವರ ಸಾಂಸ್ಕೃತಿಕ ಅಭಿವ್ಯಕ್ತಿ ಹಲವು ಹತ್ತು ಅಭಿವ್ಯಕ್ತಿಗಳನ್ನು ಪಡೆದುಕೊಂಡಿದೆ. ಕವಿತೆಯೆಂಬುದು ಅವರ ಅನೇಕ ಅಭಿವ್ಯಕ್ತಿಗಳಲ್ಲಿ ಒಂದು ಅಷ್ಟೆ" (ಓ.ಎಲ್. ನಾಗಭೂಷಣಸ್ವಾಮಿ-ಆ ಅಜ್ಜ ಈ ಮೊಮ್ಮಗ-ಮುನ್ನುಡಿ)

ಕರ್ನಾಟಕ ಸಾಹಿತ್ಯ ಅಕಾಡೆಮಿ ಕುರಿತು ಪ್ರಕಟಿಸಿರುವ `ಜನಪದ ಮುಕ್ತಕಗಳು` ಇವರ ಮತ್ತೊಂದು ಕೃತಿ. ಮುಕ್ತಕಗಳನ್ನು ಹೀಗೆಂದಿದ್ದಾರೆ. ಜನಪದ ಮುಕ್ತಕಗಳ ಕಡೆಗೆ ನಮ್ಮ ವಿದ್ವಾಂಸರ ಗಮನ ಹರಿದಿದೆ. ಇದನ್ನು ಹೊಸ ಬಗೆಯಿಂದ ಅವರು ನೋಡತೊಡಗಿದ್ದಾರೆ. ಇಲ್ಲಿ ಸಂಕಲನವಾಗಿರುವ ಮುಕ್ತಕಗಳು ಜಾನಪದರ ಜೀವನ, ವಿಧಾನ, ಚಿಂತನೆ, ಮನೋಗ್ರಹಿಕೆಗಳ ಹಿನ್ನೆಲೆಯಲ್ಲಿ ವ್ಯಕ್ತಿ, ಕುಟುಂಬ, ಸಮಾಜಗಳ ಎಲ್ಲ ವಿಧದ ಸಂಬಂಧಗಳನ್ನೂ ಹೇಳುತ್ತವೆ. ಇವು ಅನುಭವ ಬಿಟ್ಟು ಅರ್ಥಕ್ಕೂ ದುಂಬಾಲು ಬೀಳುವ ದಡ್ಡತನ ತೋರಿಲ್ಲ. ಭಾವಕ್ಲೀಷ್ಟತೆ, ಕ್ಲೀಷ್ಟೆಗಳ ಸೋಂಕಿಲ್ಲದ ಇವುಗಳಲ್ಲಿ ಮಣ್ಣಿನ ಬದುಕಿನ ಅಂತಃಸ್ಸತ್ವದ ಹೂಳಹು ಇದೆ.

ಜಾನಪದರು ತಮ್ಮ ವೃತ್ತಿ ಆಧಾರಿತ ಜಾತಿ, ಮತ, ಪಂಗಡಗಳ ಎಲ್ಲೇ ಮೀರಿ ಮಾನವ ಕಾಳಜಿ ತೋರಿರುವುದನ್ನು ಇಲ್ಲಿಯ ಮುಕ್ತಕಗಳು ಅರಿವಿಗೆ ತರುತ್ತವೆ. ಇವು ಅವರ ಸ್ವಭಾವೋಕ್ತಿ ಪ್ರಿಯತೆ. ಅವರವರ ಪಾರಿಸರಿಕ ಜೀವನ ಕ್ಷೇತ್ರಗಳಿಂದಲೇ ದೃಷ್ಟಾಂತಗಳನ್ನು ಆಯ್ದುಕೊಳ್ಳುವ ಸ್ವಂತಿಕೆಗಳನ್ನು ಮರೆಯುತ್ತವೆ. ಅಂತೆಯೇ ಜನಪದ ಮುಕ್ತಕಗಳು ಬೆಲ್ಲದ ಪುತ್ಥಳಿಗಳು. `ಎಲ್ಲಿ ಚುಂಬಿಸಿದರೂ ಇನಿದು` ಕನ್ನಡ ಸೊಲ್ಮಿನ ರಸಗಮ್ಯ ಬಂಧದತೆಯನ್ನು ವಿಜೃಂಭಿಸುವ ಮೇಲ್ಮೆ ಇದಕ್ಕಿದೆ.

ಇವರ ಮತ್ತೊಂದು ಅಪರೂಪದ ಕೃತಿ `ಚೆಗಟೇರಿ ಪದಕೋಶ. ಕನ್ನಡದ ಸಂದರ್ಭದಲ್ಲಿ ಇದು ತನ್ನಷ್ಟಕ್ಕೆ ತಾನೇ ಮಾದರಿಯಾಗಿರುವ ನಿಘಂಟು. ಈ ನಿಘಂಟು ರಚನೆಯ ಹಿಂದೆ ಐವತ್ತು ವರ್ಷಗಳ ಶ್ರಮವಿದೆ. ಹಲವಾರು ಕಥೆ ಇದೆ. "ಸುಮಾರು ಐವತ್ತೈದು ವರ್ಷಗಳ ಹಿಂದೆ ಒಂದು ದಿನ ನಮ್ಮೂರ ೮೦-೮೫ರ ವಯಸ್ಸಿನ ದಿ. ಗುಡ್ಲಾನೂರ ಗೋಣೆಜ್ಯನ ಮಕ ಕಂಡಾಗ "ಏನಜ್ಜ, ಎಲ್ಲಿ ಹೋಗಿದ್ದಿ?

ಎಂದು ಕೇಳಿದೆ ನಮ್ಮಾಕಿಗೆ ಈ ಸಾಲಿ ತರಾಕೆ" ಎಂದು ಬಗಲಲ್ಲಿಯ ರಾಂಪುರದ ಸೀರೆ ತೋರಿಸಿದ. ಸಾಲಿ ಎಂದರೆ ಓದೋ ಸಾಲಿ ಎಂದು ಮಾತ್ರ ತಿಳಿದಿದ್ದ ನಾನು ನಿಬ್ಬೆರಗಾದೆ. "ಸಾಲಿ ಅಂದ್ರೆ ಸೀರಿ ಅಂತಾ ಅರ್ಥೇನು ಸಾರ್" ಎಂದು ನಮ್ಮ ಸಾಲಿ ಮೇಷ್ಟ್ರನ್ನ ಕೇಳಿದೆ. ಅದೊಂದು ಅಚ್ಚಗನ್ನಡದ ಗ್ರಾಮ್ಯ ಶಬ್ದವಿರಬೌದು" ಎಂದರು. ಈ ಶಬ್ದ ನನ್ನ ಕುತೂಹಲ ಕೆರಳಿಸಿ ಆಡು ಮಾತುಗಳನ್ನು ಕಿವಿಗೊಟ್ಟು ಕೇಳುವಂತೆ ಮಾಡಿತು. ಆ ನಂತರ ನನ್ನ ಗಮನ ಸೆಳೆದ ಗಬಸ್ದುಳಿ, ಗದ್ಮಿ, ಕಾಟುಗ, ಚಾವತ್ತು, ದಸಾರಿ, ನೆಲಹಡುಕ ಮುಂತಾದ ಎಷ್ಟೋ ಆಡು ನುಡಿಗಳು ಕುತೂಹಲ ಕೆರಳಿಸಿದವು. ಇವು ನಿಘಂಟಿಗೆ ಹೊರತಾದ ಶಬ್ದಗಳೆಂದು ಕಂಡುಕೊಂಡೆ. ಕಳೆದ ನಲವತ್ತೈದು ವರ್ಷಗಳಿಂದ ನನ್ನ ಕಿವಿದೆರೆಯ ಮೇಲೆ ಬಿದ್ದ ಗ್ರಂಥಸ್ಥವಲ್ಲದ, ಕಿಟೆಲ್ ಕೋಶವಲ್ಲಿಲ್ಲದ ಪದಗಳನ್ನು ಈ ವರೆಗೆ ಸಂಗ್ರಹಿಸುತ್ತಾ ಬಂದಿದ್ದೇನೆ.

ನನ್ನ ಈ ಸಂಗ್ರಹಕಾರ್ಯದ ಹುಚ್ಚನ್ನು ೧೯೫೪ರಲ್ಲಿ ಒಮ್ಮೆ ಡಾ. ಶಿವರಾಮ ಕಾರಂತರಲ್ಲಿ ತಿಳಿಸಿದೆ. "ಪ್ರಕಟನೆಯ ಅವಸರ ಬೇಡ ಇನ್ನೂ ಸಂಗ್ರಹಿಸುತ್ತಾ ಹೋಗಿ. ಮತ್ತಷ್ಟು ಹೆಚ್ಚಿನ ನಿಧಿ ದೊರಿತೀತು" ಎಂದರು. ೧೯೭೦ರಲ್ಲಿ ನನ್ನ ಈ ಪದಕೋಶ ರಚನೆಯ ಬಗ್ಗೆ ಲಿಂ. ಸಂ.ಶಿ. ಭೂಸನೂರಮಠರೊಂದಿಗೆ ಸಮಾಲೋಚಿಸಿದೆ. "ನಮ್ಮಲ್ಲಿ ಪ್ರತ್ಯೇಕ ಉಪಭಾಷಾಕೋಶವೇ ಇಲ್ಲ. ಅಗತ್ಯ ಮಾಡ್ರಿ. ನಮ್ಮ ಶರಣರ ಸೂಳ್ನುಡಿಗಳೊಳಗ ಎಂಥಂಥಾ ಆಡು ಮಾತುಗಳನ್ನು ಬಳಸ್ಯಾರ. ಒಂದೊಂದು ಶಬ್ದಕ್ಕೂ ಮುತ್ತು ಮಾಣಿಕ್ಯದ ಕಿಮ್ಮತ್ತು" ಎಂದು ಬೆನ್ನು ತಟ್ಟಿದರು. ಒಂದೊಮ್ಮೆ ಬಳ್ಳಾರಿ ಜಿಲ್ಲೆಯ ಸಮಸ್ತ ಆಡು ನುಡಿಗಳ ನಿಘಂಟನ್ನು ರಚಿಸುವ ಆವೇಶ ನನ್ನದಾಗಿತ್ತು. ಆದರೆ ಅದಕ್ಕೆ ನನ್ನಂಥ ಹಲವಾರು ಜನ ಬೇಕೆಂಬುದರ ಅರಿವಾಯಿತು. ಪೆಡಂಭೂತಾಕಾರಾದ ಕ್ಷೇತ್ರಕಾರ್ಯ ಬಾಹುಳ್ಯ ನನ್ನನ್ನು ಹಿಮ್ಮೆಟ್ಟಿಸಿತು. ಅಂತೆಯೇ ನಾನು ಕೂಡಿಟ್ಟ ಆಡು ನುಡಿಗಳಲ್ಲಿ ಒಂಬತ್ತು ಸಾವಿರದಷ್ಟನ್ನು ಹೆಕ್ಕಿ ತೆಗೆದು ಈ `ಚಿಗಟೇರಿ ಪದಕೋಶ`ವನ್ನು ಸಿದ್ಧಗೊಳಿಸಿದ್ದೇನೆ. (ಚಿಗಟೇರಿ ಪದಕೋಶ: ಅರಿಕೆಯಿಂದ) ಈಗಿರುವ ನಿಘಂಟುಗಳನ್ನು, ಅವುಗಳ ಮಾದರಿಗಳನ್ನು, ಅವು ಕೇವಲ ಗ್ರಾಂಥಿಕ ಭಾಷೆಯಲ್ಲೇ ಇದ್ದದ್ದನ್ನು ಗಮನಿಸಿದ ಸಂಗಣ್ಣನವರು ನಿಘಂಟುಗಳ ದೋಷವನ್ನು ಕಂಡರು. ಭಾಷೆಗೆ ನಿಜವಾದ ಶಕ್ತಿ ಇರುವುದು ಜನ ಸಾಮಾನ್ಯರು ಆಡುವ ಭಾಷೆಯಲ್ಲಿ. ಇದನ್ನು ಸಹಜವಾಗಿ ಗಮನಿಸಿದ ಇವರು ತಾವಿದ್ದ ಚಿಗಟೇರಿ ಹಾಗೂ ಸುತ್ತಲಿನ ಹಳ್ಳಿಗಳ ಪರಿಸರದ ಪದಗಳನ್ನು ಸಂಗ್ರಹಿಸುತ್ತಾ ಬಂದರು. ಹೀಗೆ ಸಂಗ್ರಹಿಸುತ್ತ ಬಂದ ಪದಗಳ ಕೋಶವೇ `ಚಿಗಟೇರಿ ಪದಕೋಶ`. ಚಿಗಟೇರಿ ಪದಕೋಶ ಎಂಬುದು ಪ್ರಾದೇಶಿಕ `ಕನ್ನಡ ವಿಶೇಷ`ದ ಅಪೂರ್ವ ಪದಕೋಶ. ತಾವು ವಾಸಿಸುತ್ತಿದ್ದ ಪ್ರದೇಶದ ನುಡಿ, ನುಡಿಗಟ್ಟುಗಳು, ಅರ್ಥ, ಬಾಳಾರ್ಥ, ಮಾಧುರ್ಯ, ಧ್ವನಿ ಇವೆಲ್ಲವನ್ನೂ ಅದನಾಡುವ ಜನರ ಹಾವ ಭಾವವೂ ಕಣ್ಣೆದುರು ಕಟ್ಟುವಂತೆ ಪರಿಶ್ರಮದ ಧಾರೆ ಹರಿಸಿ ಸಂಗಣ್ಣನವರು ರಚಿಸಿದ್ದಾರೆ. ಈ ಪದಕೋಶದಲ್ಲಿ ಮಳೆ ಬೀಳೋದನ್ನು ೨೪ ನಮೂನಿ ಗುರಿತಿಸಿದ್ದಾರೆ. ಹೀಗೆ ಅಪರೂಪದ, ಜನರಿಂದ ಮರೆಯಾಗುತ್ತಿರುವ ಅನೇಕ ಶಬ್ದಗಳನ್ನು ಇವರು ಸಂಗ್ರಹಿಸಿದ್ದಾರೆ. `ಚಿಗಟೇರಿ ಪದಕೋಶ` ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಗಮನಾರ್ಹ ಆಕರ ಗ್ರಂಥವಾಗಿದೆ. ಸಂಸ್ಥೆ ಅಥವಾ ವಿಶ್ವವಿದ್ಯಾಲಯಗಳು ಮಾಡಬಹುದಾದ ಕಾರ್ಯವನ್ನು ಸಂಗಣ್ಣರೊಬ್ಬರೆ ಮಾಡಿ ತೋರಿಸಿದ್ದಾರೆ. ಜಾನಪದ ವಿದ್ವಾಂಸ, ಭಾಷಾತಜ್ಞರು ಆದದ್ದು ಇವರ ವಿಶೇಷ. (ಈ ಕೃತಿಗೆ ಅಂತರಾಷ್ಟ್ರೀಯ ಭಾಷಾ ವಿಜ್ಞಾನ ಪ್ರಶಸ್ತಿ ದೊರೆತಿದೆ)

ಸಂಗಣ್ಣನವರು ಬರೆದ ಏಕೈಕ ಜೀವನ ಚರಿತ್ರೆ ಕೊಂಡಜ್ಜಿ ಬಸಪ್ಪನವರು`. ಕೊಂಡಜ್ಜಿ ಬಸಪ್ಪನವರು ಈ ನಾಡು ಕಂಡ ಅಪರೂಪದ ಧೀಮಂತ ರಾಜಕಾರಣಿ. ಸರಳ, ಸಜ್ಜನರಾಗಿದ್ದ ಬಸಪ್ಪನವರು ಸಂಗಣ್ಣನವರ ಆತ್ಮೀಯ ಸನ್ಮಿತ್ರರು. ಬಸಪ್ಪನರೊಂದಿಗೆ ಹೆಚ್ಚು ಸ್ನೇಹ, ವಿಶ್ವಾಸಗಳಿಂದ ಇಬ್ಬರು ಹತ್ತಿರದವರಾಗಿದ್ದರು. ಈ ಕಾರಣದಿಂದಾಗಿಯೇ ಕೊಂಡಜ್ಜಿ ಬಸಪ್ಪನವರ ಜೀವನವನ್ನು ಹಾಗೂ ಸಮಕಾಲಿನ ರಾಜಕೀಯ ಮೌಲ್ಯ-ಅಪಮೌಲ್ಯಗಳ ಹಿನ್ನೆಲೆಯಲ್ಲಿ ದಾಖಲಿಸಿದ್ದಾರೆ.

# ಏಕೀಕರಣ ಚಳವಳಿ

ಏಕೀಕರಣ ಚಳವಳಿ ಹಾಗೂ ಸ್ವಾತಂತ್ರ್ಯ ಹೋರಾಟದ ಚಳವಳಿಯಲ್ಲಿ ಬಳ್ಳಾರಿ ಜಿಲ್ಲೆ ತನ್ನದೇ ಆದ ಸ್ಥಾನವನ್ನು ಪಡೆದಿತ್ತು. ಏಕೀಕರಣ ಚಳವಳಿಯಲ್ಲಿ ಹುತಾತ್ಮರಾದ ರಾಜ್ಯದ ಏಕೈಕ ವ್ಯಕ್ತಿ ಬಳ್ಳಾರಿಯ ರಂಜಾನ್‌ಸಾಬ್. ಸ್ವಾತಂತ್ರ್ಯ ಚಳವಳಿಯಲ್ಲಿ ಕೊಟ್ಟೂರು, ಹರಪನಹಳ್ಳಿ ಚಳವಳಿಯ ಕೇಂದ್ರಗಳಾಗಿದ್ದವು. ಏಕೀಕರಣ ಚಳವಳಿಯಲ್ಲಿ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರೀಯವರು ರಾಜ್ಯಮಟ್ಟದ ನೇತಾರರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಟೇಕೂರ ಸುಬ್ರಹ್ಮಣಂ, ಬೂದಿಹಾಳ ಅನಂತಚಾರ್, ಬೆಲ್ಲದ ಚೆನ್ನಪ್ಪ, ಡಾ. ನಾಗನಗೌಡ್ರು ಮುಂಚೂಣಿಯಲ್ಲಿದ್ದರು. ಇವರೆಲ್ಲರ ಸಂಪರ್ಕದಲ್ಲಿ ಚಳವಳಿಯ ರೂಪರೇಷ ಸಿದ್ಧಪಡಿಸಿ ಹೋರಾಟ ನಡೆಸಿದವರು ಮುದೇನೂರ ಸಂಗಣ್ಣ.

ಹರಪನಹಳ್ಳಿಯ ಪ್ರೌಢಶಾಲೆಯಲ್ಲಿ `ಕರ್ನಾಟಕ ಏಕೀಕರಣ` ಎಂಬ ವಿಷಯದ ಬಗ್ಗೆ ಭಾಷಣ ಸ್ಪರ್ಧೆಯಲ್ಲಿ ಮಾತನಾಡಿ ಮೊದಲ ಬಹುಮಾನ ಪಡೆದ ಸಂಗಣ್ಣ, ಮುಂದೆ ಹರಪನಹಳ್ಳಿ ಭಾಗದಲ್ಲಿ ಏಕೀಕರಣ ಚಳವಳಿಯ ನಾಯಕತ್ವ ವಹಿಸಿಕೊಂಡು ಹೋರಾಡಿದ್ದವರು. ತೆಲುಗರನ್ನು ಹಿಮ್ಮೆಟ್ಟಿಸಬೇಕು ಎನ್ನುವ ಹರಪನಹಳ್ಳಿ ಹೋರಾಟದಲ್ಲಿ ಇವರದ್ದು ಪ್ರಮುಖ ಪಾತ್ರವಾಗಿತ್ತು. ಈ ಹೋರಾಟದ ಪರಿಣಾಮವಾಗಿಯೇ ಇವರನ್ನು ಬಂಧಿಸಿ ಒಂದು ತಿಂಗಳ ಕಾಲ ಸೆರೆಮನೆಯಲ್ಲಿ ಇರಿಸಲಾಗಿತ್ತು. ಕನ್ನಡದ ನಾಡು, ನುಡಿ, ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ಹೋರಾಡಿದ್ದರು. ಆದರೆ ಅವರು ಎಲ್ಲೂ ಕೂಡ ಹೇಳಿಕೊಳ್ಳದ ವ್ಯಕ್ತಿತ್ವದವರು.

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ತೆಲುಗರ ಬೇಡಿಕೆ ವಿರುದ್ಧ ನಡೆದ ಹೋರಾಟಗಳಲ್ಲಿ ಮುದೇನೂರು ಸಂಗಣ್ಣನವರ ಪಾತ್ರ ಮಹತ್ವದ್ದಾಗಿದೆ. ಬಳ್ಳಾರಿಯನ್ನು ಕಬಳಿಸಲು ಹಾಕಿದ್ದ ಹೊಂಚನ್ನು ವಿಫಲಗೊಳಿಸುವಲ್ಲಿ ಇವರು ಭಾಗವಹಿಸಿದ್ದ ಹೋರಾಟಗಳು ಯಶಸ್ವಿಯಾಗಿದ್ದವು. ಇವರ ನಾಡು, ನುಡಿಯ ಸೇವೆಯನ್ನು ಗುರುತಿಸಿ ಸರ್ಕಾರ ರಾಜ್ಯೋತ್ಸವ, `ಏಕೀಕರಣ ಪ್ರಶಸ್ತಿ`ಯನ್ನು ನೀಡಿ ಗೌರವಿಸಿದೆ.

ಮಗ ರಾಜಕೀಯ ಮುಖಂಡನಾಗಬೇಕೆಂದು ಇವರ ತಂದೆ ಕೊಟ್ರುಗೌಡರ ಆಸೆಯಾಗಿತ್ತು. ಹೀಗಾಗಿಯೇ ಸಂಗಣ್ಣರನ್ನು ರಾಜಕೀಯಕ್ಕೆ ಪ್ರವೇಶ ಮಾಡಿಸಿದರು. ೧೯೫೭ರಲ್ಲಿ ಚಿಗಟೇರಿ ಗ್ರಾಮ ಪಂಚಾಯ್ತಿ ಚೇರಮನ್‌ರಾಗಿ ಆಯ್ಕೆಯಾಗಿದ್ದವರು. ಇವರ ಅವಧಿಯಲ್ಲಿ ಗ್ರಾಮಕ್ಕೆ ಹಲವಾರು ಜನಪರ ಕೆಲಸಗಳನ್ನು ಮಾಡಿದವರು. ತಾಲೂಕ ಬೋರ್ಡ್ ಸದಸ್ಯರಾಗಿಯೂ ಕೆಲಸ ಮಾಡಿದವರು. ಚಿಗಟೇರಿಯ ನಾರದ ಮುನಿಯ ಹೈಸ್ಕೂಲಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದವರು.

ಚುನಾವಣಾ ರಾಜಕೀಯದ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ. ಆದರೆ ತಂದೆ ಹಾಗೂ ಜನರ ಒತ್ತಡಕ್ಕೆ ಮಣಿದು ೧೯೬೨ರ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾ ಸೋಷಲಿಸ್ಟ ಪಕ್ಷದ (ಪಿ.ಸಿ.ಸಿ.) ಅಭ್ಯರ್ಥಿಯಾಗಿ ಹರಪನಹಳ್ಳಿಯ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿದವರು. ಹರಪನಹಳ್ಳಿಯ ಪ್ರಭಾವಿಯಾಗಿದ್ದ ಕಾಂಗ್ರೆಸ್ಸಿನ ಇಜಾರಿ ಶಿರಸಪ್ಪನವರು ಸಹ ಸ್ಪರ್ಧಿಸಿದ್ದರು. ಇವರ ಇಬ್ಬರ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಆದರೆ ಚುನಾವಣಾ ರಾಜಕೀಯ ಅರಿಯದ ಸಂಗಣ್ಣನವರು, ಜಾತಿ ರಾಜಕಾರಣ, ಅದರಲ್ಲೂ ವೀರಶೈವರ ಒಳಜಾತಿ ಕಾರಣದಿಂದ ಸೋತರು. ಸೋಲು ಹಾಗೂ ಚುನಾವಣಾ ರಾಜಕಾರಣದ ಕರಾಳ ಮುಖಗಳನ್ನು ಆ ಕಾಲಕ್ಕೆ ಕಂಡು ಆಶ್ಚರ್ಯಗೊಂಡರು. ಆವತ್ತಿನಿಂದಲೇ ರಾಜಕೀಯದಿಂದ ದೂರ ಉಳಿದರು.

ಸಂಗಣ್ಣನವರು ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಅನುಭವವನ್ನು ಹೀಗೆ ಹಂಚಿಕೊಂಡಿದ್ದವರು. "೧೯೬೨ರಲ್ಲಿ ವಿಧಾನಸಭೆ ಚುನಾವಣೆಗೆ ನಾನು ಸ್ಪರ್ಧಿಸಿದಾಗ, ನಾನು, ನನ್ನ ಸಹೋದರ ಸೇರಿ ಮಾಡಿದ ವೆಚ್ಚ ಒಟ್ಟು ಏಳುಸಾವಿರ ರೂಪಾಯಿ. ಫಲಿತಾಂಶ ಬಂದಾಗ ನಾನು ಏಳುಸಾವಿರ ಮತಗಳ ಅಂತರದಿಂದ ಸೋತಿದ್ದೆ. ಅಂದು ಇಂದಿನ ಚುನಾವಣೆಗಳಿಗೆ ಬಹಳ ವ್ಯತ್ಯಾಸವಿದೆ. ಈಗಿನಷ್ಟು ಭ್ರಷ್ಟಾಚಾರ ಇರಲಿಲ್ಲ. ಈ ಹೆಂಡ, ಸೀರೆ ಕೊಡೋ ಪದ್ಧತಿ ತಿಳಿದಿರಲಿಲ್ಲ. ಜಾತಿ-ಮತ ಲೆಕ್ಕಾಚಾರ ಸ್ವಲ್ಪ ಇದ್ರೂ ಮೇಲ್ವರ್ಗಕ್ಕೆ ಸೀಮಿತವಾಗಿತ್ತು. ಜಾತಿ ಆಧಾರಿಸಿ ಟಿಕೆಟ್ ಕೊಡುವ ಈಗಿನ ಪದ್ಧತಿ ಆಗ ಇರಲಿಲ್ಲ. ಒಂದೇ ಒಂದು ಸಾವಿರ ರೂಪಾಯಿ

ಹಂಚಿದ್ದರೆ ಚುನಾವಣೆಯಲ್ಲಿ ಗೆದ್ದು ಬಿಡುತ್ತಿದ್ದೇನೋ, ಆದರೆ ಮತ ಖರೀದಿಗೆ ಮನಸ್ಸು ಒಪ್ಪಲಿಲ್ಲ. ಆ ಜಾಯಮಾನವು ನನ್ನದಾಗಿರಲಿಲ್ಲ".

ಹಣದ ಥೈಲಿ ಹಿಡಿದ ರಾಜಕಾರಣಿಗಳು ಈಗ ಲಕ್ಷ ಲಕ್ಷ ಸುರೀತಾ ಇದ್ದಾರೆ. ಒಂದು ವೇಳೆ ಮಹಾತ್ಮಾ ಗಾಂಧೀಜಿ ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ರೆ, ಜನ ಅವರಿಂದಲೂ ಹೆಂಡ, ಹಣ ಬಯಸ್ತಿದ್ರು. ವ್ಯವಸ್ಥೆ ಅಷ್ಟು ಕೆಟ್ಟಿದೆ. ಆಗ ತ್ಯಾಗಕ್ಕೆ ಕಿಮ್ಮತ್ತಿತ್ತು. ಪ್ರಾಮಾಣಿಕತೆಗೆ ಬೆಲೆ ಇರ್ತಿತ್ತು. ಈಗ ರೊಕ್ಕಕ್ಕೆ ಬೆಲೆ ಇದೆ ಎಂದು ರಾಜಕಾರಣದ ಬಗ್ಗೆ ವಿಷಾದವ್ಯಕ್ತಪಡಿಸಿದ್ದರು.

## ಬಾಲ್ಯ ಮತ್ತು ಬದುಕು

ಹಿಂದಿನ ಬಳ್ಳಾರಿ ಜಿಲ್ಲೆಯ ಹಾಗೂ ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಚಿಕ್ಕ ಗ್ರಾಮ `ಚಿಗಟೇರಿ`. ಹರಪನಹಳ್ಳಿ-ಕೊಟ್ಟೂರು ರಸ್ತೆಯ ಮಧ್ಯೆದಲ್ಲಿ ಗುಡ್ಡದ ಸಾಲು ಇದನ್ನು ನೋಡುತ್ತಾ ಒಂದಿಷ್ಟು ಹೋದರೆ ಸಿಗುವುದೇ ಚಿಗಟೇರಿ. ಇಲ್ಲಿಯ ನೂರಾರು ಎಕರೆ ಆಸ್ತಿ ಹಾಗೂ ಸಜ್ಜನಿಕೆ ಎರಡರಲ್ಲಿಯೂ ಶ್ರೀಮತಂವಾದ ಮನೆತನದಲ್ಲಿ ದಿನಾಂಕ ೧೭.೦೩.೧೯೨೭ರಲ್ಲಿ ಸಂಗಣ್ಣ ಜನಿಸಿದರು. ತಂದೆ ಮುದೇನೂರು ಕೊಟ್ರಬಸಪ್ಪ, ತಾಯಿ ಸಿದ್ದಮ್ಮ. ಇವರ ತಂದೆ ಕಟ್ಟಾ ರಾಷ್ಟ್ರೀಯವಾದಿಯಾಗಿದ್ದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಂಥವರು. ೭೦೦ ಎಕರೆ ಭೂಮಿಯ ಒಡೆಯರಾಗಿದ್ದರೂ ಶ್ರೀಮಂತಿಕೆಯ ಗತ್ತುಗಮ್ಮತ್ತು ಇರದ ಸರಳ ಸಜ್ಜನಿಕೆಯ ವ್ಯಕ್ತಿತ್ವದವರಾಗಿದ್ದರು.

ಚಿಗಟೇರಿಯಲ್ಲಿಯೇ ಇವರ ಪ್ರಾಥಮಿಕ ಶಿಕ್ಷಣ ನಡೆಯಿತು. ಶ್ರೀಮಂತರ ಮನೆಯ ಹುಡಗನಾಗಿದ್ದರಿಂದ ಊರಿನ ಹುಡಗರು ಪ್ರೀತಿಯಿಂದ ಜೊತೆಗೆ ಆಟವಾಡುತ್ತಿದ್ದರು. ಮುಂದೆ ಹರಪನಹಳ್ಳಿಗೆ ಹೋದರು. ಅಲ್ಲಿ ಹುಡಗರ ಜೊತೆ ಯಾವುದೇ ಆಟಕ್ಕೂ ಹೋಗುತ್ತಿರಲಿಲ್ಲ. ಒಂದು ರೀತಿ ಏಕಾಂಗಿಯಂತೆ ಇದ್ದವರು. ೧೯೫೪ನೇ ಇಸ್ವಿ ಶಾಲಾ ವಾರ್ಷಿಕೋತ್ಸವದ ಸಂದರ್ಭ, ಭಾಷಣ ಸ್ಪರ್ಧೆಯಲಿ ಭಾಗವಹಿಸುವ ಸಲುವಾಗಿ ಹೆಡ್ ಮಾಸ್ಟರ್ ಹತ್ತಿರ ಹೆಸರು ಬರೆಸಲು ಹೋದಾಗ, ಸಂಗಣ್ಣನನ್ನು ಗಮನಿಸಿದ ಹೆಡ್ ಮಾಸ್ಟರ್, `ನೀನೇನ್ ಭಾಷ್ಣ ಮಾಡ್ತಿಯಾ? ನಾಳೆ ಬಂದು ಕರ್ನಾಟಕ ಏಕೀಕರಣದ ಬಗ್ಗೆ ಒಂದೈದ್ ನಿಮಿಷ ಮಾತಾಡು ಅಂದ್ರು`

ಹಾಗೇನೆ ಮರುದಿನ ಕರ್ನಾಟಕ ಏಕೀಕರಣದ ಬಗ್ಗೆ ಮಾತನಾಡಿದಾಗ, ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂತು. ಇದರಿಂದ ಸ್ಪೂರ್ತಿ ಪಡೆದ ಸಂಗಣ್ಣ ಕವಿತೆಗಳನ್ನು ಬರೆಯಲು ಆರಂಭಿಸಿದ. ಮಾಸ್ತಿ ಮೇಲೆ ಕವಿತೆ ಬರೆದರು. ಮೇಷ್ಟ್ರು ಅದನ್ನು ತಿದ್ದಿ, ಪ್ರಕಟಿಸಿದರು. ಅದನ್ನು ಓದಿಸಿ, ಸಂಗೀತ ಅಳವಡಿಸಿ ಹಾಡ್ಸಿದ್ದು. ಇದರಿಂದಾಗಿ ಸ್ಪೂರ್ತಿ ಪಡೆದು ಕವಿತೆಗಳನ್ನು ಬರೆಯುವುದನ್ನು ಮುಂದುವರಿಸಿದರು. ಕೀಳರಮೆಯಿಂದ ಹೊರ ಬಂದು ಕವಿತೆ, ಸಾಹಿತ್ಯದ ಕಡೆ ಗಮನ ಹರಿಸಿದರು.

ಹೈಸ್ಕೂಲಿನ ವಾರ್ಷಿಕೋತ್ಸವಗಳಿಗೆ ಬೇಂದ್ರೆ, ಬಿ.ಎಂ. ಶ್ರೀಕಂಠಯ್ಯ, ವಿ. ಸೀತಾರಾಮಯ್ಯ, ಅ.ನ. ಕೃಷ್ಣರಾಯರು, ಮಾಸ್ತಿ ಹೀಗೆ ಹೆಸರಾಂತ ಸಾಹಿತಿಗಳು ಬಂದು ಹೋಗುತ್ತಿದ್ದರು. ಇವರ ಭಾಷಣ ಹಾಗೂ ಅವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಸಾಹಿತ್ಯದ ಗುಂಗು ಹಿಡಿಯಿತು. ಶಾಲೆಗೆ ಬಂದು ಮಾರಾಟ ಮಾಡುತ್ತಿದ್ದ ಸಾಹಿತಿಗಳ ಪುಸ್ತಕಗಳಿಂದಲೂ ಆಕರ್ಷಿತರಾಗಿ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹೈಸ್ಕೂಲಿನ ಸಕೆಂಡ್ ಇಯರ್ ಇದ್ದಾಗ ಇವರ ಕವಿತೆ `ಜಯಂತಿ` ಪತ್ರಿಕೆಯಲ್ಲಿ ಪ್ರಕಟವಾಯಿತು. ಆ ಕಾಲಕ್ಕೆ ಇದು ಪ್ರತಿಷ್ಠಿತ ಪತ್ರಿಕೆಯಾಗಿತ್ತು.

ಹೈಸ್ಕೂಲ್ ಮುಗಿಸಿ ಕಾಲೇಜ್ ವಿದ್ಯಾಭ್ಯಾಸಕ್ಕೆ ಇವರ ಗುರುಗಳಾಗಿದ್ದ ಆನಂದರಾಯರ ಶಿಫಾರಸ್ಸಿನ ಮೇರೆಗೆ ಮದನಪಲ್ಲಿಯ ಥಿಯಾಸಾಫಿಕಲ್ ಕಾಲೇಜಿಗೆ ಸೇರಿದರು. ಇಲ್ಲಿ ಉದಾತ್ತ ಜೀವನ ನಡೆಸುತ್ತಿದ್ದಂಥ ಅಧ್ಯಾಪಕರ ವರ್ಗ ಇತ್ತು. ಎಲ್ಲ ಕಡೆಯಲ್ಲಿಯು `ಆದರ್ಶ`ದ ಗಾಳಿ ಬೀಸುತ್ತಿತ್ತು. ಅರವಿಂದರ ಪ್ರಭಾವಕ್ಕೊಳಗಾಗಿ ಅಜನ್ಮ ಬ್ರಹ್ಮಚಾರಿಯಾಗಿರಲು ಬಯಸಿದ್ದರು. ಆದರೆ ತಂದೆ-

ತಾಯಿಯರ ಒಪ್ಪಿಗೆ ದೊರೆಯದೆ ಹೋಯಿತು. ಇದರಿಂದಾಗಿ ಮದನಪಲ್ಲಿಯಿಂದ ಚಿಗಟೇರಿಗೆ ಬರಬೇಕಾಯಿತು. ಶಾರದಮ್ಮನವರೊಂದಿಗೆ ಇವರ ವಿವಾಹ ನಡೆಯಿತು. ಶಾರದಮ್ಮ ಮತ್ತು ಸಂಗಣ್ಣನವರದ್ದು ಅನೂನ್ಯವಾದ ಜೋಡಿ. ಒಂದು ಗಂಡು, ಮೂರು ಹೆಣ್ಣು ಮಕ್ಕಳ ಸುಖಿ ಸಂಸಾರ.

೭೦೦ ಎಕರೆ ಭೂಮಿಯ ಒಡೆಯರಾಗಿದ್ದ ಇವರ ತಂದೆ, ಮೂಲತಃ ಕೃಷಿಕರಾಗಿದ್ದರು. ಹೀಗಾಗಿ ಮದನಪಲ್ಲಿಯಿಂದ ಸೀದಾ ಚಿಗಟೇರಿಗೆ ಬಂದು ಮನೆತನದ ಬೇಸಾಯದ ಕಾರ್ಯವನ್ನು ನೋಡಿಕೊಳ್ಳಹತ್ತಿದರು. ಚಿಗಟೇರಿಯ ಸುತ್ತಮುತ್ತ ರೈತರು ತಂಬಾಕು ಬೆಳೆಯನ್ನು ಹೆಚ್ಚು ಹೆಚ್ಚು ಬೆಳೆಯುತ್ತಿದ್ದರು. ಇದರ ಖರೀದಿಗಾಗಿ ಒಂದು ದಲ್ಲಾಳಿ ಅಂಗಡಿ ಬೇಕಾಗಿತ್ತು. ಇದನ್ನು ಪೂರೈಸುವಂತೆ ಊರಿನ ಜನ ಇವರ ತಂದೆಯ ಮೇಲೆ ಒತ್ತಡ ಹೇರುತ್ತಿದ್ದರು. ಗಾಂಧಿವಾದಿಯಾಗಿದ್ದ ಇವರ ತಂದೆ ಈ ವೃತ್ತಿಯನ್ನು ಕೈಗೊಳ್ಳಲು ಇಷ್ಟಪಡುತ್ತಿರಲಿಲ್ಲ. ಆದರೆ ಜನರ ಒತ್ತಡಕ್ಕೆ ಮಣಿದು ರೈತರ ಅನುಕೂಲಕ್ಕಾಗಿ ದಲ್ಲಾಳಿ ಅಂಗಡಿಯನ್ನು ಪ್ರಾರಂಭಿಸಿದರು. ಇದನ್ನು ಸಂಗಣ್ಣನವರು ನೋಡಿಕೊಳ್ಳಬೇಕಾಯಿತು.

ಚಿಗಟೇರಿಯಲ್ಲಿ ೧೯೫೨ರಲ್ಲಿ ತಂಬಾಕಿನ ದಲ್ಲಾಳಿ ವ್ಯಾಪಾರದ ಅಂಗಡಿಯನ್ನು ಸಂಗಣ್ಣನವರು ಆರಂಭಿಸಿದರು. ಇವರ ಇನ್ನೊಬ್ಬ ಪಾಲುದಾರ ಈಶ್ವರಪ್ಪನವರು. ತಂಬಾಕಿನ ಗುಣಮಟ್ಟದ ಮೇಲೆ ವರ್ಗೀಕರಣ, ದರ ನಿಗದಿಪಡಿಸುವಲ್ಲಿ ಪರಿಣಿತರಾಗಿದ್ದರು. ಆದರೆ ಸಂಗಣ್ಣನವರು ದಲ್ಲಾಳಿ ಅಂಗಡಿಯ ಬಗ್ಗೆ ಅಷ್ಟೊಂದು ಆಸಕ್ತಿ ತೋರುತ್ತಿರಲಿಲ್ಲ. ಇವರು ಜಾನಪದ, ಸಾಹಿತ್ಯ, ಸಂಗೀತ, ನಾಟಕಗಳ ಬಗ್ಗೆ ಹೆಚ್ಚು ಆಕರ್ಷಿತರಾಗಿದ್ದರು. ಇದರಿಂದಾಗಿ ಅಂಗಡಿಯ ಪಾಲುದಾರ ಈಶ್ವರಪ್ಪನವರೇ ಅಂಗಡಿಯ ವ್ಯವಹಾರಗಳನ್ನು ಹೆಚ್ಚು ನೋಡಿಕೊಳ್ಳುತ್ತಿದ್ದರು.

ಇವರ ಅಂಗಡಿಯಲ್ಲಿ ಗ್ರಾಮದ ಹಿರಿಯರಾಗಿದ್ದ ಭರ್ಮಪ್ಪ ಬಂದು ಕುಳಿತುಕೊಳ್ಳುತ್ತಿದ್ದರು. ಗ್ರಾಮದ ಜನರು ಅವರಲ್ಲಿಗೆ ಬಂದು ತಮ್ಮ ಮನೆ, ಹೊಲದಲ್ಲಿ ಕಳವು ಆದ ವಸ್ತುಗಳ ಬಗ್ಗೆ, ಆಕಳು, ಎಮ್ಮೆ ಕಳೆದು ಹೋದ ಬಗ್ಗೆ, ಮದುವೆ, ಮುಂಜಿ, ನಾಮಕರಣಗಳನ್ನು ಮಾಡಲು ಶುಭಮುಹೂರ್ತದ ಬಗ್ಗೆ ಪ್ರಶ್ನೆ ಕೇಳುತ್ತಿದ್ದರು. (ಪ್ರಶ್ನೆ ಕೇಳುವುದೆಂದರೆ ಜ್ಯೋತಿಷ್ಯ ಕೇಳುವುದು) ಇವುಗಳ ಬಗ್ಗೆ ಸಂಗಣ್ಣರಿಗೆ ನಂಬಿಕೆ ಇರಲಿಲ್ಲ. ಆದರೆ ಎಂದೂ ಭರ್ಮಪ್ಪನವರ ಪ್ರಶ್ನೆ ಹೇಳುವ ಕಾರ್ಯಕ್ಕೆ ಅಡ್ಡಿ ಬರದೆ ಅವರನ್ನು ಗೌರವಿಸುತ್ತಿದ್ದರು. ಅಂದರೆ ಅವರ ವಿಚಾರವನ್ನು ಯಾರ ಮೇಲೆಯು ಬಲವಂತವಾಗಿ ಹೇರುತ್ತಿರಲಿಲ್ಲ. ದೀಪಾವಳಿ ಸಂದರ್ಭದಲ್ಲಿ ವ್ಯಾಪಾರಸ್ಥರು ತಮ್ಮ ಅಂಗಡಿಗಳಲ್ಲಿ ಲಕ್ಷ್ಮೀ ಪೂಜೆ ಮಾಡುತ್ತಿದ್ದರೆ, ಅಂಥ ನಂಬಿಕೆಯೇ ಇಲ್ಲದ ಸಂಗಣ್ಣನವರು ತಮ್ಮ ದಲ್ಲಾಳಿ ಅಂಗಡಿಯಲ್ಲಿ ಪೂಜೆಯ ಬದಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು.

ಇವರದ್ದು ತಂಬಾಕಿನ ವ್ಯಾಪಾರವಾಗಿದ್ದರಿಂದ ಇದನ್ನು ಖರೀದಿಸಲು ದೂರದ ಮಹಾರಾಷ್ಟ್ರ, ಆಂಧ್ರದಿಂದ ವ್ಯಾಪಾರಿಗಳು ಚಿಗಟೇರಿಗೆ ಬರುತ್ತಿದ್ದರು. ವ್ಯಾಪಾರ, ವ್ಯವಹಾರಗಳಿಂದ ಇವರು ದೂರದ ಕರ್ನಾಟಕದ ಗಡಿ ಭಾಗವಾದ ನಿಪ್ಪಾಣಿಗೆ ಹೋಗಿ ಬರುತ್ತಿದ್ದರು. ಸುಗ್ಗಿಯ ಸಂದರ್ಭದಲ್ಲಿ ಮಹಾರಾಷ್ಟ್ರದಿಂದ ಬಂದ ವ್ಯಾಪಾರಿಗಳು ತಿಂಗಳಗಟ್ಟಲೆ ಇವರಲ್ಲಿ ಉಳಿದುಕೊಂಡಿರುತ್ತಿದ್ದರು. ಆಗ ಉಳಿಯಲು ಹೊಟೇಲ್, ಲಾಡ್ಜಗಳ ವ್ಯವಸ್ಥೆ ಇಲ್ಲದ್ದರಿಂದ ಇವರ ಮನೆ, ಅಂಗಡಿಗಳಲ್ಲಿ ಉಳಿಯುತ್ತಿದ್ದರು. ಇವರ ಒಡನಾಟದಿಂದ ಮರಾಠಿಯನ್ನು ಕಲಿತರು. ಮರಾಠಿ ಕಲಿಕೆಯಿಂದ ಇವರ ತಂಬಾಕಿನ ವ್ಯಾಪಾರ ನಿಪ್ಪಾಣಿಯಲ್ಲಿನ ವ್ಯವಹಾರಕ್ಕೆ ಅನುಕೂಲವಾಯಿತು.

ಚಿಗಟೇರಿಯಲ್ಲಿ ಇದ್ದಾಗ ಇವರ ನಾಟಕ, ಸಾಹಿತ್ಯದ ಆಸಕ್ತಿಯನ್ನು ಕಂಡಿದ್ದ ಮರಾಠಿ ವ್ಯಾಪಾರಸ್ಥರು, ನಿಪ್ಪಾಣಿಗೆ ಹೋದಾಗ ಇವರನ್ನು ಮರಾಠಿಯ ಒಳ್ಳೊಳ್ಳೆ ನಾಟಕಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ಕೊಲ್ಲಾಪುರ, ಸಾಂಗ್ಲಿ, ಮೀರಜ್‌ನಲ್ಲಿ ಕಂಪನಿಗಳ ನಾಟಕ ನಡೆಯುತ್ತಿದ್ದಾಗ ನಿಪ್ಪಾಣಿಯ ವ್ಯಾಪಾರಸ್ಥರು ಚಿಗಟೇರಿಯ ಸಂಗಣ್ಣನವರಿಗೆ ಟೆಲಿಗ್ರಾಂ ಕೊಟ್ಟು ನಾಟಕ ನೋಡಲು ಕರೆಯಿಸಿಕೊಳ್ಳುತ್ತಿದ್ದರು.

ಇವರಂಥೆ ಸಂಗೀತ, ಸಾಹಿತ್ಯದಲ್ಲಿ ಆಸಕ್ತಿ ಇದ್ದ ಮರಾಠಿ ವ್ಯಾಪಾರಸ್ಥರು ಸಂಗಣ್ಣನವರು ನಿಪ್ಪಾಣಿಗೆ ಹೋದಾಗ, ಕೆಲವು ಮರಾಠಿ ಸಾಹಿತಿಗಳನ್ನು ಕೊಲ್ಲಾಪುರದಿಂದ ಕರೆಯಿಸಿ ಪರಿಚಯ ಮಾಡಿಸುತ್ತಿದ್ದರು. ಹಾಗೇನೆ ಸಂಗೀತದ ಗೋಷ್ಠಿಯನ್ನು ಸಹ ಏರ್ಪಾಡು

ಮಾಡುತ್ತಿದ್ದರು. ವ್ಯಾಪಾರ, ವ್ಯವಹಾರದಲ್ಲಿ ಕನ್ನಡ-ಮರಾಠಿ ಬಾಂಧವ್ಯ ಗಟ್ಟಿಗೊಳ್ಳುತ್ತಿತ್ತು. ಈ ಹೊತ್ತಿನ ಬೆಳಗಾವಿಯ ಎಂ.ಇ.ಎಸ್.ನವರಿಗೆ ಇದು ಆದರ್ಶವಾಗಬೇಕು.

ಸಂಗಣ್ಣನವರು ತಮ್ಮ ದಲ್ಲಾಳಿಯ ಅಂಗಡಿಯ ವ್ಯವಹಾರದ ಲಾಭ-ನಷ್ಟದ ಬದಲು ಸಾಹಿತ್ಯ, ಸಂಗೀತ, ಜಾನಪದ, ನಾಟಕಗಳ ಬಗ್ಗೆನೇ ಹೆಚ್ಚು ಹೆಚ್ಚು ಚಿಂತಿಸುತ್ತಿದ್ದರು. ಮರಾಠಿ ಗೆಳೆಯರ ಮೂಲಕ ಮರಾಠಿ ಸಾಹಿತ್ಯದ ಪರಿಚಯ, ಅಧ್ಯಯನ, ಅನುವಾದ ಸಾಧ್ಯವಾಯಿತು.

# ಪ್ರವೇಶ

ಜಾನಪದ ಕ್ಷೇತ್ರದ ಪ್ರತಿಷ್ಠಿತ ಹೆಸರು ಮುದೇನೂರು ಸಂಗಣ್ಣ. ಜಾನಪದ ಮತ್ತು ಸಾಹಿತ್ಯವನ್ನು ಒಂದುಗೂಡಿಸಿದ `ಜಾನಪದ ರಂಗಭೂಮಿಯನ್ನು ಸೃಜನವಾಗಿ ಸೃಷ್ಟಿಸಿ ಸಮಕಾಲಿನ ಜಾನಪದ ರಂಗಭೂಮಿಯ ತಜ್ಞರಿಗಿಂತ ಭಿನ್ನವಾದ ಆಲೋಚನೆ, ಪ್ರಯೋಗಗಳನ್ನು ನಡೆಸಿ, ಜಾನಪದ ರಂಗಭೂಮಿಯನ್ನು ಪುನರುಜ್ಜೀವನಗೊಳಿಸಿದ ಧೀಮಂತ. ನಾಡಿನ ಸಮೃದ್ಧ ಜಾನಪದ ಪರಂಪರೆಯನ್ನು ವಿಸ್ತರಿಸಿದ ಸಾಂಸ್ಕೃತಿಕ ಹರಿಕಾರ. ಮಣ್ಣಿನ ಮಕ್ಕಳ ಪರಂಪರಾಗತ ಕಲೆಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದವರು.

ತಾವಿದ್ದ `ಚಿಗಟೇರಿ` ಊರನ್ನೇ ಕೇಂದ್ರವಾಗಿರಿಸಿಕೊಂಡು, ಕನ್ನಡ ನಾಡು, ನುಡಿ, ಸಂಸ್ಕೃತಿ, ಜಾನಪದ ಪರಂಪರೆ, ರಂಗಭೂಮಿ ಸಾಹಿತ್ಯ, ರಾಜಕಾರಣ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಹೇಗೆ ಕೆಲಸ ಮಾಡಬಹುದೆಂಬುದನ್ನು ತೋರಿಸಿಕೊಟ್ಟವರು. ತಮ್ಮ ಹಳ್ಳಿ ಹಾಗೂ ಮನೆಯನ್ನೇ ಕೇಂದ್ರವಾಗಿರಿಸಿಕೊಂಡು ಜಾನಪದವನ್ನೇ ಉಸಿರಾಗಿಸಿಕೊಂಡು ಕೊನೆಯತನಕ ಹಳ್ಳಿಯಲ್ಲೇ ಉಳಿದವರು.

ಸಂಗಣ್ಣ ಜಾನಪದ ಸಂಗ್ರಹಕಾರರಾಗಿ, ನಾಟಕಕಾರರಾಗಿ, ಕವಿಯಾಗಿ, ಸಾಹಿತಿಯಾಗಿ, ಮರಾಠಿ-ಬಂಗಾಳಿ ಕೃತಿಗಳ ಅನುವಾದಕರಾಗಿ, ಭಾಷಾಕೋಶ ರಚನೆಕಾರರಾಗಿ ಕೆಲಸ ಮಾಡಿದವರು. ಹೆಸರು, ಅಧಿಕಾರ, ಹಣಕ್ಕಾಗಿ ಯಾವತ್ತು ಜಾನಪದವನ್ನು ಬಳಸಿಕೊಂಡವರಲ್ಲ. ಚಿಗಟೇರಿಯ ಪ್ರತಿಷ್ಠಿತ ಭೂಮಾಲಿಕರ ಕುಟುಂಬದಲ್ಲಿ ಜನಸಿ, ಬೆಳೆದ ಸಂಗಣ್ಣ ವೃತ್ತಿಯಿಂದ ತಂಬಾಕು ವ್ಯಾಪಾರಸ್ಥರಾಗಿದ್ದರೂ ಸಮಾಜಮುಖಿಯಾಗಿ ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದು ಹಾಗೂ ಎಷ್ಟೊಂದು ಜ್ಞಾನ, ಕುತೂಹಲಗಳಿಗೆ ಈಡಾಗಿದ್ದರು ಎನ್ನುವುದೇ ಕುತೂಹಲ ಹಾಗೂ ಆಶ್ಚರ್ಯದ ಸಂಗತಿ.

ಅತ್ಯಂತ ಸರಳ, ಸಜ್ಜನಿಕೆಯ ವ್ಯಕ್ತಿತ್ವದವರಾಗಿದ್ದರು. ಬೇಂದ್ರೆ, ಮಧುರ ಚೆನ್ನ, ಸಿಂಪಿ ಲಿಂಗಣ್ಣರಂತೆ ದೇಶಿಯತೆ ಹಾಗೂ ಜಾನಪದ ಪರಂಪರೆಯನ್ನು ಮುಂದುವರಿಸಿದವರು. ಕುಟುಂಬ ಜೀವಿಯಾಗಿದ್ದ ಇವರು ಸ್ನೇಹಕ್ಕೆ, ವಿಶ್ವಾಸಕ್ಕೆ ಮಹತ್ವ ಕೊಟ್ಟಿದ್ದರು. ಯಾರನ್ನು ವಿನಾ ಕಾರಣ ಹೊಗಳದೆ, ಹಾಗೇನೆ ಯಾರಿಂದಲೂ ಹೊಗಳಿಸಿಕೊಳ್ಳಲು ಬಯಸದೆ ಕೊನೆಯವರಿಗೂ ತಮ್ಮ ತನವನ್ನು ಕಾಯ್ದುಕೊಂಡಿದ್ದವರು.

ರಾಷ್ಟ್ರೀಯ ಚಳವಳಿ, ಏಕೀಕರಣ ಚಳವಳಿ, ಕನ್ನಡ ನವೋದಯ ಸಂದರ್ಭ, ಗಾಂಧಿ-ಲೋಹಿಯಾ ಹಾಗೂ ಜೀವನವನ್ನು ಪರಿಭಾವಿಸಿಕೊಳ್ಳದ, ಸಾಕ್ಷಿ ಪ್ರಜ್ಞೆಯನ್ನು ಎತ್ತಿ ಹಿಡಿಯುವ ಸಕಲಕ್ಕೂ ಲೇಸನ್ನು ಬಯಸುವ ಶರಣರ ಚಿಂತನೆ ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು. ಈ ಪ್ರಭಾವದಿಂದಾಗಿಯೇ ಅವರು ಶ್ರೀಮಂತಿಕೆಯಿದ್ದರೂ, ಗತ್ತುಗೈರತ್ತಿನಿಂದ ಹಾಗೂ ವ್ಯಾಪಾರ ವೃತ್ತಿಯಲ್ಲಿದ್ದರೂ ವ್ಯವಹಾರಿಕತೆಯಿಂದ ಹೊರಗುಳಿದು ಸಮಾಜಮುಖಿಯಾಗಿದ್ದರು.

ಗ್ರಾಮೀಣ ಪ್ರದೇಶದ ಕಲಾವಿದರೊಂದಿಗೆ ನಿರಂತರ ಸಂಪರ್ಕ, ಅವರ ಕಷ್ಟ-ನಷ್ಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ತಮ್ಮಿಂದಾದ ನೆರವಿನ ಹಸ್ತ ನೀಡುತ್ತಿದ್ದರು. ಪ್ರತಿಭಾವಂತ ಆದರೆ ಜನಪ್ರಿಯರಲ್ಲದ ಅನೇಕ ಕಲಾವಿದರನ್ನು ಅವರು ಗುರುತಿಸುತ್ತಿದ್ದರು. ಅಂಥ ಪ್ರತಿಭಾವಂತ ಕಲಾವಿದರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಆ ದಿನ ಸದಭಿರುಚಿಯ ಆಸಕ್ತ ಆತ್ಮೀಯರನ್ನೆಲ್ಲಾ ಸಹ ಕರೆದು ಮನೆಯಲ್ಲಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಆ ಕಲಾವಿದರಿಂದ ಹಾಡಿಸಿ, ಕುಣಿಸಿ ಅವರ ಪ್ರತಿಭೆಯನ್ನು ಕಂಡು ಸಂಭ್ರಮ, ಸಂತೋಷ ಪಡುತ್ತಿದ್ದರು. ಕಲಾವಿದರಿಗೆ ಹೊಸ ಬಟ್ಟೆ, ಹಣ ಕೊಟ್ಟುಕಳುಹಿಸುತ್ತಿದ್ದರು. ಬಂದ ಒಡನಾಡಿಗಳಿಗೆಲ್ಲ ಪುಷ್ಕಳ ಊಟ ಉಣಬಡಿಸುತ್ತಿದ್ದರು.

ಇವರ ಆತ್ಮೀಯ ಸನ್ಮಿತ್ರ ಕೆ.ವಿ. ಸುಬ್ಬಣ್ಣನವರಿಗೆ `ಮ್ಯಾಗ್ಸೇಸೆ ಪ್ರಶಸ್ತಿ` ಬಂದಾಗ ಮನೆಯಲ್ಲಿ ಸಂಗೀತ ಕಾರ್ಯಕ್ರಮ ಏರ್ಪಡಿಸಿ ಆತ್ಮೀಯರನ್ನೆಲ್ಲ ಕರೆಯಿಸಿ ಹೋಳಿಗೆ ಊಟ ಉಣಬಡಿಸಿ ಸಂತೋಷ ಪಟ್ಟವರು. ಸ್ನೇಹಿತನಿಗೆ ಪ್ರಶಸ್ತಿ ಬಂದರೆ ತಮಗೆ ಬಂದಷ್ಟು ಸಂತೋಷ ಪಡುವ ವಿಶಾಲ ಮನಸ್ಸಿನ ವ್ಯಕ್ತಿತ್ವವನ್ನು ಸಂಗಣ್ಣನವರಲ್ಲಿ ಬಿಟ್ಟು ಬೇರೆ ಯಾರಲ್ಲೂ ಕಾಣಲು ಸಾಧ್ಯವಿಲ್ಲ. ಅದಕ್ಕೆಂದೆ ಶಿವರಾಮ ಕಾರಂತರು `ಸಂಗಣ್ಣ ಅಪ್ಪಟ ಚಿನ್ನ` ಎಂದು ಕರೆದಿದ್ದಾರೆ. ಇವರ ಮನೆಯೇ ಒಂದು ಸಾಂಸ್ಕೃತಿಕ ಕೇಂದ್ರ. ಮನೆಯ ತುಂಬಾ ಪುಸ್ತಕಗಳು. ಜಾನಪದ ಸಂಗ್ರಹದ ಧ್ವನಿಸುರಳಿಗಳು. ಕನ್ನಡ, ಹಿಂದಿ, ಮರಾಠಿ, ತೆಲಗು, ಬಂಗಾಳಿ, ಇಂಗ್ಲೀಶ್ ಭಾಷೆಯ ಕಾವ್ಯ, ನಾಟಕಗಳ ಪುಸ್ತಕಗಳು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅಪೂರ್ವ ಸಂಗ್ರಹ ಇವರ ಮನೆಯಲ್ಲಿದೆ. ಸತತವಾಗಿ ೧೦೦ಕ್ಕೂ ಹೆಚ್ಚು ಗಂಟೆಗಳ ಕಾಲ ಕೇಳಬಹುದಾದ ಜಾನಪದ ಸಂಗೀತದ ಸಂಗ್ರಹ ಇದೆ. ಅಪರೂಪದ ರಾಗಗಳು ಹಾಗೂ ಗಾಯಕರ ಸಂಗೀತವನ್ನು ಸಹ ಸಂಗ್ರಹಿಸಿಟ್ಟಿದ್ದಾರೆ.

ಹಳೆಯ ಕಾಲದ ಅಮೂಲ್ಯವಾದ ಪುಸ್ತಕ ಭಂಡಾರವಿದೆ. `ಜೀವನ`, ‘ಜಯ ಕರ್ನಾಟಕ`, ಎನ್ ಕೌಂಟರ್`, ಇಂಪ್ರಿಂಟ್` ಮೊದಲಾದ ಪತ್ರಿಕೆಗಳ ಸಂಗ್ರಹವಿದೆ. ತಮ್ಮ ಮನೆಯಲ್ಲೇ ಅಕಾಡೆಮಿಕ್ ವಾತಾವರಣನ್ನುಂಟು ಮಾಡಿದ್ದರು. ವಿದ್ವಾಂಸರನ್ನು ಆಹ್ವಾನಿಸಿ ಸಾಹಿತ್ಯ-ಸಂಗೀತ-ಸಾಂಸ್ಕೃತಿಕ ಚಿಂತನೆಗಳ ಗೋಷ್ಠಿಗಳನ್ನು ನಡೆಸುತ್ತಿದ್ದರು. ಮನೆಯ ಈ ಗೋಷ್ಠಿಗಳಲ್ಲಿ ಶಿವರಾಮ ಕಾರಂತ, ಕೆ.ವಿ. ಸುಬ್ಬಣ್ಣ, ಕು.ಸಿ. ಹರಿದಾಸಭಟ್ಟ, ಚಂದ್ರಶೇಖರ ಕಂಬಾರ, ಎಂ.ಪಿ. ಪ್ರಕಾಶ್, ಶ್ರೀಮತಿ ಸುಭದ್ರಮ್ಮ ಮನ್ಸೂರು ಮೊದಲಾದ ಸಾಹಿತಿ, ಕಲಾವಿದರು ಭಾಗವಹಿಸಿದ್ದಿದೆ. ಕಡಲತೀರದ ಕಾರಂತರು, ಉತ್ತರ ಕರ್ನಾಟಕದ ಸಂಗಣ್ಣನರದ್ದು ಅವಿನಾವಭಾವ ಸಂಬಂಧ. ಹೀಗಾಗಿಯೇ ಈ ಭಾಗದ ಸುತ್ತಲಿನ ಯಾವುದಾದರು ಪ್ರದೇಶಕ್ಕೆ ಕಾರಂತರು ಬಂದರೆ ಅವರು ಚಿಗಟೇರಿಯ ಸಂಗಣ್ಣನವರನ್ನು ಹುಡಿಕಿಕೊಂಡು ಹೋಗುತ್ತಿದ್ದರು. ಸಂಗಣ್ಣನವರ ಆತಿಥ್ಯ ಸ್ವೀಕರಿಸುತ್ತಿದ್ದರು. ತಮ್ಮ ಗಹನವಾದ ವಿಷಯ ವಿನಿಮಯ ಚರ್ಚೆಗಳನ್ನು ನಡೆಸುತ್ತಿದ್ದರು. ಒಂದು ಕಾಲಕ್ಕೆ ಸಂಗಣ್ಣನವರ ಆಸಕ್ತಿಯಿಂದ ಊರಿನಲ್ಲಿ ಒಂದಿಲ್ಲೊಂದು ಜಾನಪದ ಕಾರ್ಯಕ್ರಮ, ಗೊಂಬೆಯಾಟ, ಜಾನಪದ ಪ್ರದರ್ಶನಗಳು ನಡೆಯುತ್ತಿದ್ದವು. ಇವುಗಳನ್ನು ನೋಡಲು ಅವರ ಆಸಕ್ತ ಸ್ನೇಹಿತರು, ಹಳ್ಳಿಯ ಜನರು ಬರುತ್ತಿದ್ದರು. ಇವುಗಳ ಖರ್ಚು-ವೆಚ್ಚಗಳನ್ನು ಸಂಗಣ್ಣರೊಬ್ಬರೇ ಭರಿಸುತ್ತಿದ್ದರು.

ಸಂಗಣ್ಣನವರ ಚಿಗಟೇರಿಗೆ ಶಿವರಾಮ ಕಾರಂತು ಮೊದಲು ಬಾರಿಗೆ ಬಂದಾಗ ಅವರು ಕಂಡದ್ದನ್ನು ಹೀಗೆ ದಾಖಲಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಚಿಗಟೇರಿ ಎಂಬ ಹಳ್ಳಿ. ಅಲ್ಲಿ ಹೊಗೆಸೊಪ್ಪಿನ ವ್ಯಾಪಾರನಿರತರಾದ ಮುದೇನೂರು ಸಂಗಣ್ಣ ಎಂಬ ಮಿತ್ರರಿದ್ದಾರೆ. ಕನ್ನಡ ನಾಡಿನ ಸುತ್ತಮುತ್ತ ನಡೆಯುತ್ತಿರುವ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಾಕ್ಷಿಯಾಗುವವರು. ಅವರು ಕೆ.ವಿ. ಸುಬ್ಬಣ್ಣನವರು ನಡೆಸಿದ ಒಂದು ಸಮಾರಂಭದಲ್ಲಿ ನನಗೆ ಅವರ ಪರಿಚಯವಾಯಿತು. ಸಂಗಣ್ಣನವರು ನೋಟಕ್ಕೆ ಅಂಥ ಆಕರ್ಷಕ ವ್ಯಕ್ತಿಗಳಲ್ಲ. ಅವರದು ಉತ್ಸಾಹದ ಮಾತುಗಾರಿಕೆ: ಅನೇಕ ವಿಷಯಗಳನ್ನು ಕುರಿತು ಆಸಕ್ತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಮೊದಲನೇ ಭೇಟಿಯಲ್ಲೇ ಅವರು ನನ್ನೊಡನೆ `ನಮ್ಮ ಚಿಗಟೇರಿಗೆ ಒಮ್ಮೆ ಬನ್ನಿ` ಎಂದರು. ನಾನು ಕುತೂಹಲದಿಂದ ಒಮ್ಮೆ ಅವರ ಊರಿಗೆ ಹೋದೆ. ಆಗ ನನಗೆ ಅವರು ಏನೆಲ್ಲ ಬರೆದಿದ್ದಾರೆ, ಏನೆಲ್ಲ ಮಾಡಿಕೊಂಡಿದ್ದಾರೆ ಎಂಬ ಜ್ಞಾನ ಇರಲಿಲ್ಲ. ಆ ಕಾಲದಲ್ಲಿ ಅವರ ವಿಷಯದಲ್ಲಿ ನನಗಿದ್ದ ತಿಳಿವಳಿಕೆಯೆಂದರೆ ಅವರು ಒಬ್ಬರು ಹೊಗೆಸೊಪ್ಪಿನ ವ್ಯಾಪಾರಿಗಳು ಎಂದು.

ನಾನು ಹೋದ ಸಂಜೆ ಉಪನ್ಯಾಸ ಏರ್ಪಡಿಸುತ್ತೇನೆ ಎಂದಿದ್ದರು. ಮೊದಲು ಅವರ ಜತೆಗೆ ಊರನ್ನು ಹೊಕ್ಕು ಅವರ ಅಂಗಡಿಯ ಚಾವಡಿಯಲ್ಲಿ ಗಾದಿ, ದಿಂಬುಗಳ ಮೇಲೆ ನವಾಬನಂತೆ ಸ್ಥಾಪಿತನಾದೆ. ಅಲ್ಲಿಂದ ಮುಂದೆ ಸಂಜೆ ಉಪನ್ಯಾಸದ ಹೊತ್ತಿನತನಕ ದೂರದೂರದಿಂದ ಎಂದರೆ ಹರಪನಹಳ್ಳಿ, ಕೊಟ್ಟೂರು, ಹಡಗಲಿ ಮೊದಲಾದ ಕಡೆಗಳಿಂದ ಅನೇಕ ಅಪರಿಚಿತರು ಬಂದು ಕಲೆಯ ತೊಡಗಿದರು. ಅವರಲ್ಲಿ ವರ್ಗದಾರರಿದ್ದರು, ಶಿಕ್ಷಕರಿದ್ದರು, ವಕೀಲರಿದ್ದರು ನಾವು ಕಲೆತ ಆ ಸ್ಥಳ ಒಂದು ಹಳ್ಳಿ ಎಂಬುದನ್ನು ತೋರಿಸುವಂತೆ ಅವರೆಲ್ಲರೂ ಜನಸಾಮಾನ್ಯರಂತೆ ಕಾಣಿಸುತ್ತಿದ್ದರು. ಹಾಗೆ ಬಂದವರು ಒಬ್ಬೊಬ್ಬರಾಗಿ ಒಂದೊಂದು ಪ್ರಶ್ನೆಯನ್ನು ಕೇಳತೊಡಗಿದಾಗ ಅಲ್ಲಿಯ ಜನರಿಗೆ ಹುದಗಿದ ಆಸಕ್ತಿಯು ರಾಜಕೀಯ, ಸಂಸ್ಕೃತಿ, ಸಾಹಿತ್ಯ ನನ್ನ ಬರವಣಿಗೆಗಳು ನವ್ಯ ಕನ್ನಡ ಸಾಹಿತಿಗಳ ಕೃತಿಗಳು ಆರ್ಥಿಕ ಪ್ರಶ್ನೆಗಳು, ಸಾಲದ್ದಕ್ಕೆ ನಾನು ನನ್ನ `ಬಾಳ್ವೆಯೇ ಬೆಳಕು` ಎಂಬ ಕೃತಿಯಲ್ಲಿ ತೋಡಿಕೊಂಡ ಸಮಸ್ಯೆಗಳು, ಇಂಥವುಗಳಿಂದ ಆಯ್ದುಕೊಂಡ ಪ್ರಶ್ನಾ ರೂಪದ ಇಂಬುಗಳಾಗಿ ಕಾಣಿಸಿದವು.

ಆ ಸಂಜೆಯ ತನಕ ಹೊತ್ತು ಹೋದದ್ದೇ ನನಗೆ ತಿಳಿಯಲಿಲ್ಲ. ಅಲ್ಲಿಗೆ ಅತಿಥಿಗಳಾಗಿ ಬಂದ ಹಲವರಲ್ಲಿ ಕಾಣಿಸಿಕೊಂಡ ಬದುಕಿನ ಸಮಸ್ಯೆಗಳನ್ನು ಕುರಿತ ಆಸಕ್ತಿ ಮತ್ತು ಕುತೂಹಲ ನನಗೆ ಆಶ್ಚರ್ಯ ಹುಟ್ಟಿಸಿತು. ಆ ಮಧ್ಯಾಹ್ನ ಮತ್ತು ಸಂಜೆ ಹೊರಗಿನಿಂದ ಬಂದ ಎಲ್ಲ ಅತಿಥಿಗಳಿಗೂ ಸಂಗಣ್ಣನವರು ಅನ್ನ ಸಂತರ್ಪಣೆ ನಡೆಸಿದರು. ಆಗ ನನ್ನ ಬಳಿಯಲ್ಲಿ ಹರಿಹರಪುರದ ಶ್ರೀನಿವಾಸ ಜೋಯಿಸರು ಇರುತ್ತಿದ್ದರೆ `ಸ್ವಾಮಿ ಮಲೆನಾಡಿನ ನಿಮ್ಮನ್ನು ಬಯಲು ಸೀಮೆಯ ಈ ಸಂಗಣ್ಣನವರು ನಾಚಿಸುತ್ತಿದ್ದರಲ್ಲ` ಎಂದು ಹೇಳುತ್ತಿದ್ದೆ. ಅದೇ ರಾತ್ರಿ ಅವರು ನನ್ನ ಸಲುವಾಗಿ ಒಂದು ಗೊಂಬೆ ಆಟವನ್ನು ಏರ್ಪಡಿಸಿದ್ದರು. ಪ್ರಾಯಶಃ ಸುತ್ತಮುತ್ತಲಿನ ಹಳ್ಳಿಗಳಿಂದ ಮನೆಯಲ್ಲಿ ಯಾರೂ ಉಳಿಯದೆ ಗೊಂಬೆ ಆಟವನ್ನು ನೋಡಲು ಸಾವಿರಾರು ಜನರು ಬಂದಿದ್ದರು. ಒಂದು ಗೊಂಬೆಯ ಆಟವನ್ನು ನೋಡುವುದಕ್ಕೆ ಅಷ್ಟೊಂದು ದೊಡ್ಡ ಜನ ಸಂದಣಿ ಸೇರಬಹುದೇ ಎಂಬ ಆಶ್ಚರ್ಯ ನನಗೆ.

ಈ ಘಟನೆ ನಡೆದ ಮೇಲೆ ಬಳ್ಳಾರಿಯ ಕಡೆಗೆ ನಾನು ಹೋದಾಗ, ಮುದೇನೂರು ಸಂಗಣ್ಣನವರ ನೆನಪು ಅವರಲ್ಲಿ ನಾನು ಹೋಗುವಂತೆ ಮಾಡುತ್ತಿತ್ತು. ಯಾರನ್ನೂ ನಾವು ಜನಸಾಮಾನ್ಯರೆಂದು ತಿಳಿಯುತ್ತೇವೆಯೋ, ಅವರ ಬುದ್ಧಿಶಕ್ತಿಗೆ ಪ್ರಚೋದನೆ ದೊರೆತಲ್ಲಿ ಅದು ಬೆಳೆಯಲು ಅವಕಾಶ ದೊರೆತಲ್ಲಿ ಆ ಸಾಮಾನ್ಯ ಪರಿಸ್ಥಿತಿಯಿಂದಲೇ ಅಸಾಮಾನ್ಯ ವಿಚಾರಶೀಲತೆಯೂ ಹುಟ್ಟಿಕೊಳ್ಳಬಲ್ಲದು ಎಂಬುದು ಮನವರಿಕೆಯಾಯಿತು. (ಸ್ಮೃತಿ ಪಟಲದ ಪುಸ್ತಕದಲ್ಲಿ) ಹೀಗೆ ಸಂಗಣ್ಣನವರ ಅಭಿರುಚಿ, ಕಾರ್ಯ ವೈಖರಿಯ ಕುರಿತು ದಾಖಲಿಸಿದ್ದಾರೆ.

ಪ್ರಚಾರದಿಂದ ದೂರವೇ ಇದ್ದ ಇವರು ಸರ್ಕಾರದ ಯಾವುದೇ ಸಹಾಯ, ಸಹಕಾರ ನಿರೀಕ್ಷಿಸದೆ, ತಮ್ಮ ವೈಯಕ್ತಿಕ ಆಸಕ್ತಿ, ಹಣದಿಂದಲೇ ಜಾನಪದ ಕಾರ್ಯಗಳನ್ನು ನಿರ್ವಹಿಸಿದವರು. ತಾವೊಬ್ಬರೆ ನಿಂತು ವ್ಯಕ್ತಿಯಾಗಿ, ಶಕ್ತಿಯಾಗಿ ಒಂದು ವಿಶ್ವವಿದ್ಯಾಲಯದ ತರಹದಲ್ಲಿ ಕೆಲಸ ಮಾಡಿದ್ದಾರೆ. ಕನ್ನಡದ ಜಾನಪದ, ರಂಗಭೂಮಿ ಜಾನಪದಲ್ಲಿ ತಮ್ಮದೆ ಆದ ರೀತಿಯಲ್ಲಿ ಸಂಗ್ರಹ, ಸಂಪಾದನೆ, ರಚನೆಯನ್ನು ಮಾಡಿದ್ದಾರೆ. ಇವರ ಬಹುತೇಕ ಎಲ್ಲಾ ಜಾನಪದ ಸಂಗ್ರಹ ಅಧ್ಯಯನ, ಪ್ರಕಟಣೆಗಳೆಲ್ಲವೂ ಅವರಿದ್ದ ಪ್ರದೇಶದ್ದೆ ಆಗಿದೆ ಎನ್ನುವುದು ವಿಶೇಷವಾದದ್ದು.

ಸಂಗಣ್ಣನವರು ಬೆಂಗಳೂರು, ಮೈಸೂರಿನ ಸಾಹಿತಿಗಳ ಸ್ನೇಹಕ್ಕಿಂತ ಹೆಚ್ಚು ದಕ್ಷಿಣ ಕನ್ನಡದ ಡಾ. ಶಿವರಾಮ ಕಾರಂತ, ಕೆ.ವಿ. ಸುಬ್ಬಣ್ಣ, ಕು.ಶಿ. ಹರಿದಾಸಭಟ್ಟ ಇವರ ಒಡನಾಟ. ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರಕ್ಕೆ ಆರಂಭದಿಂದಲೂ ಸಲಹೆಗಾರರಾಗಿದ್ದವರು. ಬಳ್ಳಾರಿ ಜಿಲ್ಲೆಯ ಹಾಗೂ ಉತ್ತರ ಕರ್ನಾಟಕದ ಕೆಲ ಪ್ರದೇಶಗಳಲ್ಲಿ ಆರ್.ಆರ್.ಸಿ ಯವರು ಸಂಗ್ರಹಿಸಿದ ಜಾನಪದ, ಪ್ರಕಟಣೆಯ ಕಾರ್ಯದಲ್ಲಿ ಇವರು ಸಕ್ರಿಯವಾಗಿ ಪಾಲ್ಗೊಂಡಿದ್ದವರು.

ಇಂಟರ್ ಮೀಡಿಯಟ್ ಓದಿದ ಗ್ರಾಮೀಣ ಕೃಷಿಕ, ಹೊಗೆಸೊಪ್ಪಿನ ವ್ಯಾಪಾರಿ ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿ ಈ ನಾಡಿಗೆ ಮಾದರಿಯಾದರು. ಜಾನಪದ ಸಂಗ್ರಹ, ಸಂಪಾದನೆಯ ಕಾರ್ಯದಲ್ಲಿ ನೂರಾರು, ಸಾವಿರಾರು ವಿದ್ವಾಂಸರು, ಅಕಾಡೆಮಿಕ್ ವಿದ್ವಾಂಸರು ಕೆಲಸ ಮಾಡುತ್ತಿದ್ದಾರೆ. ಆದರೆ ಇವರೆಲ್ಲರಿಗಿಂತ ಸಂಗಣ್ಣ ಜಾನಪದ ಕ್ಷೇತ್ರದಲ್ಲಿ ವಿಶಿಷ್ಟವಾಗಿ ನಿಲ್ಲುತ್ತಾರೆ. ಈ

ಕಾರಣದಿಂದಾಗಿಯೇ ಅಧ್ಯಯನ ಹಾಗೂ ಸಂಶೋಧನೆ ಮೂಲದ ಕನ್ನಡ ವಿಶ್ವವಿದ್ಯಾಲಯವು, ನಾನ್ ಅಕಾಡೆಮಿಕ್ ವ್ಯಕ್ತಿಯಾಗಿದ್ದ ಸಂಗಣ್ಣರನ್ನು ಘಟಿಕೋತ್ಸವ ಭಾಷಣ (ನುಡಿಹಬ್ಬ ೧೦, ೨೦೦೧) ಮಾಡಲು ಆಹ್ವಾನಿಸಿದ್ದು ಹಾಗೂ ಸಂಗಣ್ಣನವರು ಘಟಿಕೋತ್ಸವ ಭಾಷಣ ಮಾಡಿದ್ದು ಐತಿಹಾಸಿಕ ಘಟನೆ ಎಂದೇ ನಾನು ಭಾವಿಸಿದ್ದೇನೆ. ಇವರಿಗೆ `ನಾಡೋಜ` ಪದವಿ ನೀಡಿ ಗೌರವಿಸಿದ್ದು ಸಂಗಣ್ಣರ ವಿದ್ವತ್ ಪರಂಪರೆಗೆ ಕೊಟ್ಟ ಗೌರವವಾಗಿದೆ. ಇವರು ಸಂಪಾದಿಸಿರುವ `ಗೊಂದಲಿಗರ ದೇವೇಂದ್ರಪ್ಪನ ಆಟಗಳು` ಪುಸ್ತಕವನ್ನು ಸಹ ಕನ್ನಡ ವಿಶ್ವವಿದ್ಯಾಲಯದ, ಪ್ರಸಾರಾಂಗ ಪ್ರಕಟಿಸಿದೆ.

ಕನ್ನಡ ವಿಶ್ವವಿದ್ಯಾಲಯದ ಮೊದಲ ಸೆನೆಟ್ ಸದಸ್ಯರಾಗಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ ವಿಶ್ವವಿದ್ಯಾಲಯದ ಬೆಳವಣಿಗೆಗ ಸಹಕರಿಸಿದ್ದಾರೆ. ವಿದ್ಯಾರಣ್ಯ ಆವರಣದ ಕಟ್ಟಡಗಳ ನಿರ್ಮಾಣದ ಕಟ್ಟಡ ಸಲಹಾ ಸಮಿತಿ ಅಧ್ಯಕ್ಷರಾಗಿ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ ಕಂಬಾರರ ಕನಸುಗಳ ಕಟ್ಟಡಗಳನ್ನು ನಿರ್ಮಿಸಲು ಸಂಪೂರ್ಣ ಸಹಕಾರ, ಬೆಂಗಲ ನೀಡಿ ವಿಜಯನಗರದ ಶೈಲಿಯ ಕಟ್ಟಡಗಳು ನಿರ್ಮಾಣವಾಗುವಂತೆ ಮಾಡಿದ್ದವರು. ವಿಶ್ವವಿದ್ಯಾಲಯದ ಪ್ರಸಾರಾಂಗ ಮೊದಲ ಬಾರಿಗೆ ಪ್ರಕಟಿಸಿದ ಶ್ರೀತ್ವನಿಧಿ, ಕನ್ನಡ ವಾರ್ಷಿಕ-೯೧, ಬಯಲು ಆಲಯ, `ಮರೆತು ಹೋಗಿರುವ ಸಾಮ್ರಾಜ್ಯ`, ಸಂಶೋಧನ ಕರ್ನಾಟಕ ಗ್ರಂಥಗಳನ್ನು ಮುದೇನೂರು ಸಂಗಣ್ಣನವರು ನುಡಿಹಬ್ಬ-೯೨ ರಲ್ಲಿ ಬಿಡುಗಡೆ ಮಾಡಿದ್ದರು. ಹೀಗೆ ಕನ್ನಡ ವಿಶ್ವವಿದ್ಯಾಲಯಕ್ಕೂ ಸಂಗಣ್ಣನವರಿಗೂ ಅವಿನಾಭಾವ ಸಂಬಂಧ.

ಗಂಭೀರ ಮುಖ ಮುದ್ರೆಯ ಸಂಗಣ್ಣ ನೇರ ನುಡಿಯ ನಿಷ್ಠುರ ಮಾತಿನವರಾಗಿದ್ದರು. ತಮಗೆ ಸರಿ ಕಾಣದ್ದನ್ನು ಸ್ಪಷ್ಟವಾಗಿ ಟೀಕಿಸುತ್ತಿದ್ದರು. ಸ್ವಲ್ಪ ಸಿಡುಕಿನ ಸ್ವಭಾವವದವರಾಗಿದ್ದರಿಮದ ಬಹಳ ಜನ ಇವರ ಹತ್ತಿರಕ್ಕೆ ಬರಲು ಹಿಂಜರಿಯುತ್ತಿದ್ದರು. ಆದರೆ ಅವರ ನಿಷ್ಠುರ ಮಾತಿನ ಹಿಂದೆ ಯಾವುದೇ ದ್ವೇಷದ ಉದ್ದೇಶವಿರುತ್ತಿರಲಿಲ್ಲ. ಅವರದು ಮಾತೃ ಹೃದಯವಾಗಿತ್ತು. ಹೊಗೆಸೊಪ್ಪಿನ ವ್ಯಾಪಾರ, ಮನೆಯ ಯಜಮಾನಿಕೆ, ಸಹೃದಯತೆ, ಅಧ್ಯಯನ-ಬರವಿಗೆ, ಓಡಾಟ ಹೀಗೆ ಎಲ್ಲವನ್ನೂ ಒಳಗೊಂಡ ವ್ಯಕ್ತಿತ್ವದ ಸಂಗಣ್ಣರನ್ನು ಕುರಿತು ಬರೆಯುವುದು ಅಷ್ಟು ಸುಲಭದ ಕಾರ್ಯವಲ್ಲ. ಅಂತರ್ಮುಖಿಯಾಗಿದ್ದ ಇವರನ್ನು ಅರ್ಥಯಿಸಿದಷ್ಟು ವ್ಯಾಪಕತೆಯನ್ನು ಪಡೆಯುತ್ತಾರೆ. ಭೂ ಮಾಲೀಕತ್ವದ ಮನೆತನದ ಇವರು ಸಮಾಜವಾದದ ಮನಸ್ಸಿನಿಂದ ಬೆಳೆದು ಬಂದಿದ್ದು ಇವರ ವ್ಯಕ್ತಿತ್ವದ ವೈಶಿಷ್ಟ್ಯ. ಸ್ನೇಹಿತರಿಗೆ ಸಂಗಣ್ಣನಾಗಿ ಕಿರಿಯರಿಗೆ `ಸಂಗಜ್ಜ`ರಾಗಿದ್ದ ಇವರನ್ನು ಪುಟಗಳ ಮಿತಿಯಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸುವ ಕಷ್ಟಸಾಧ್ಯದ ಪ್ರಯತ್ನ ಇಲ್ಲಿದೆ.

## ಶಬ್ದಪಾರಮಾರ್ಗವಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಕತ್ವದ `ವಿಕಾಸ` ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ

ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. `ಕನ್ನಡದ್ದೇ ಮಾದರಿ`ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್ ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ `ಜ್ಞಾನ` ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

`ನಾಡೋಜ` ಎನ್ನುವುದು ಕನ್ನಡದ ಆದಿಕವಿ ಪಂಪನ ಬಿರುದು. ನಾಡೋಜ ಎಂದರೆ ನಾಡಿನ ಹಿರಿಯ ನಾಡಿನ ಉಪಾಧ್ಯಾಯ, ನಾಡಿನ ಶಿಲ್ಪಿ, ನಾಡಿನ ರೂವಾರಿ. ಆಚಾರ್ಯ ಪುರುಷ ಎನ್ನುವ ವಿಶಿಷ್ಟ ಅರ್ಥಗಳಿವೆ.

ಜೀವಮಾನದುದ್ದಕ್ಕೂ ಕನ್ನಡದ ನೆಲ, ಜಲ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ, ಇತಿಹಾಸ ಎಲ್ಲಾ ಹೀಗೆ ತಂತ್ರಜ್ಞಾನ ಹಲವು ನೆಲೆಗಳಲ್ಲಿ ಕನ್ನಡ ಹಾಗೂ ಕರ್ನಾಟಕವನ್ನು ಕ್ರಿಯಾಶೀಲವಾಗಿಸುತ್ತ ಬಂದ ಧೀಮಂತ ಚೇತನಗಳನ್ನು ನಾಡೋಜ ಗೌರವ ಪದವಿ ನೀಡುವ ಮೂಲಕ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಬಳಗಕ್ಕೆ ಸೇರಿಸಿಕೊಳ್ಳುತ್ತ ಬಂದಿದೆ. ಸಮಾಜದ ಅನೇಕ ಕರಾರುಗಳಿಂದಾಗಿ ಮೂಲೆಗುಂಪಾದ ಕರ್ನಾಟಕದ ಜನಸಮುದಾಯಗಳ ಬದಿಕಿನ ರೀತಿ ನೀತಿ ವೃತ್ತಿಗಳ ಅಧ್ಯಯನ ವಿಶ್ವವಿದ್ಯಾಲಯದ ಮೊದಲ ಆದ್ಯತೆಯಾದಂತೆ ಅಂಥಸ್ಮರದಿಂದ ಬಂದ ಧೀಮಂತ ಚೇತನಗಳಿಗೂ ನಾಡೋಜ ಗೌರವ ಪದವಿ ನೋಡುವ ಮೂಲಕ ಕನ್ನಡದ ಸ್ವಾಭಿಮಾನ ಹಾಗೂ ಸ್ವಾವಲಂಬತೆಯನ್ನು ಪೋಷಿಸುತ್ತ ಬಂದಿದೆ.

ಈ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯವು ತನ್ನ ಮೊದಲ ಘಟಿಕೋತ್ಸವದಲ್ಲಿ (೧೫ ಫೆಬ್ರುವರಿ ೧೯೯೫) ಕನ್ನಡ-ಕರ್ನಾಟಕದ ಸಾರ್ವಭೌಮತ್ವದ ಸಾಕಾರಮೂರ್ತಿಗಳಾದ ರಾಷ್ಟ್ರಕವಿ ಕುವೆಂಪು ಅವರಿಗೆ ಹಾಗೂ ಸನ್ಮಾನ್ಯ ನಿಜಲಿಂಗಪ್ಪ, ಶ್ರೀಮತಿ ಗಂಗೂಬಾಯಿ ಹಾನಗಲ್ ಅವರಂಥ ಶ್ರೇಷ್ಠರಿಗೆ ಮೊದಲ ಬಾರಿಗೆ ನಾಡೋಜ ಗೌರವ ಪದವಿ ಪ್ರದಾನ ಮಾಡಲಾಯಿತು. ಇದು ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರ ಕನಸಿನ ಸಾಕಾರ ಎನ್ನುವುದು ವಿಶೇಷ. ೧೯೯೫ ರಿಂದ ೨೦೧೧ರವರೆಗೆ ಸಾಹಿತ್ಯ, ಸಂಶೋಧನೆ, ಕಲೆ, ಸಂಗೀತ, ಪತ್ರಿಕೋದ್ಯಮ, ಸಮಾಜ, ಸಮುದಾಯ, ಕಾನೂನು, ಪರಿಸರ, ನೃತ್ಯ, ಅಭಿನಯ, ಇತಿಹಾಸ ಪುರಾತತ್ವ, ಜಾನಪದ, ಬುಡಕಟ್ಟು, ವಿಜ್ಞಾನ, ತಂತ್ರಜ್ಞಾನ ಹೀಗೆ ಹಲವು ಕ್ಷೇತ್ರಗಳ ವಿಸ್ತರಣೆ ಹಾಗೂ ವೃದ್ಧಿಗೆ ತಮ್ಮನ್ನು ಸಮರ್ಪಿಸಿಕೊಂಡು ಕನ್ನಡ ಹಾಗೂ ಕರ್ನಾಟಕದ ಕೀರ್ತಿಯನ್ನು ಭೂಮಂಡಲದುದ್ದಕ್ಕೂ ಚಿರಸ್ಥಾಯಿಗೊಳಿಸಿದ ಹಿರಿಯರಿಗೆ ನಾಡೋಜ ಗೌರವ ಪದವಿ ನೀಡುವ ಮೂಲಕ ಗೌರವಿಸುತ್ತ ಬಂದಿದೆ. ಇದು ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಸಾರ್ವಭೌಮತ್ವ ಅಧಿಪತ್ಯಕ್ಕೂ ಶ್ರಮಿಸುತ್ತಿರುವ ಉಪಯುಕ್ತ ದಾರಿಯಾಗಿದೆ.

ಇಂಥ ಹಿರಿಯರ ಜೀವನಾನುಭವಗಳು, ಸಾಧನೆ-ಸಿದ್ಧಿಗಳು ಕನ್ನಡಿಗರೆಲ್ಲರಿಗೂ ಸುಲಭವಾಗಿ ದೊರೆಯಬೇಕೆನ್ನುವ ಸದುದ್ದೇಶದಿಂದ ನಮ್ಮ ನಾಡೋಜರು ಎನ್ನುವ ಸರಣಿಯ ಮೂಲಕ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ `ನಾಡೋಜ ಮುದೇನೂರು ಸಂಗಣ್ಣ`ರನ್ನು ಕುರಿತು ಶ್ರೀ ಎಂ.ಎಂ. ಶಿವಪ್ರಕಾಶ ಇವರು ಬರೆದು ಕೊಟ್ಟಿದ್ದಾರೆ. ಮುದೇನೂರು ಸಂಗಣ್ಣ ಅವರನ್ನು ಕುರಿತಂತೆ ಅಮೂಲ್ಯ ಮಾಹಿತಿಯನ್ನು ಒದಗಿಸಿದ್ದಾರೆ. ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆಗಳು ಸಲ್ಲಿಸುತ್ತಿದ್ದೇನೆ. ಕನ್ನಡದ ಓದುಗರು ಎಂದಿನಂತೆ ನಮ್ಮ ಈ ಪ್ರಯತ್ನವನ್ನು ಸ್ವಾಗತಿಸುತ್ತಾರೆನ್ನುವ ನಂಬಿಕೆ ನಮ್ಮದಾಗಿದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ